ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಆರ್‌ಸಿಬಿ ತಂಡದ ವೇಗಿ ಯಶ್ ದಯಾಳ್ ಕಂಟೆಂಟ್ ಕ್ರಿಯೆಟರ್ ಶ್ವೇತಾ ಪುಂಡಿರ್ ಅವರನ್ನು ಫೆ.4ರಂದು ಉತ್ತರ ಪ್ರದೇಶದ ನೋಯ್ಡಾದಲ್ಲಿ ಕುಟುಂಬ ಮತ್ತು ಆಪ್ತ ಸ್ನೇಹಿತರ ಸಮ್ಮುಖದಲ್ಲಿ ಗುಟ್ಟಾಗಿ ವಿವಾಹವಾಗಿದ್ದಾರೆ.


16 ಮಾರ್ಚ್ 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 6 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ನಾಯಕನನ್ನು ಕೊಲ್ಲುವ ಮೂಲಕ ಈ ಯುದ್ಧ ಶುರುವಾಯಿಲ್ಲ ! » 2



ಜನ ಜೀವನದ ಮೇಲೆ ಘೋರ ಪರಿಣಾಮ ಬೀರಿದ ಯುದ್ಧ » 3



ದ್ವಿತೀಯ ಪಿಯು ಪಾಸಾಗಲು ಎರಡೇ ಅವಕಾಶ » 4


# ಪಂಚ ರಾಜ್ಯಗಳ ಚುನಾವಣೆಗೆ ದಿನಾಂಕ ನಿಗದಿ

## ಒಟ್ಟು 824 ವಿಧಾನಸಭಾ ಕ್ಷೇತ್ರ | ಮೇ 4 ರಂದು ಫಲಿತಾಂಶ

• ಪ್ರಜೋದಯ ವರದಿ

**ಹೊಸದಿಲ್ಲಿ:** ಬಹು ನಿರೀಕ್ಷಿತ ಪಂಚ ರಾಜ್ಯಗಳ ಚುನಾವಣಾ ದಿನಾಂಕವನ್ನು ಕೇಂದ್ರ ಚುನಾವಣಾ ಆಯೋಗ ಪ್ರಕಟಿಸಿದೆ.

ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಪುದುಚೇರಿ ಮತ್ತು ಅಸ್ಸಾಂನಲ್ಲಿ ಮತದಾನ ನಡೆಯಲಿದೆ. ಭಾನುವಾರ ಚುನಾವಣಾ ಆಯೋಗ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ಹಂಚಿಕೊಂಡರು.

ಪಶ್ಚಿಮ ಬಂಗಾಳದಲ್ಲಿ ಏ.23 ಮತ್ತು 29ರಂದು ಎರಡು ಹಂತದಲ್ಲಿ ಚುನಾವಣೆ ನಡೆಯಲಿದೆ. ಕೇರಳ, ಪುದುಚೇರಿ ಮತ್ತು ಅಸ್ಸಾಂನಲ್ಲಿ ಏ. 9 ರಂದು ಮತದಾನ ನಡೆಯಲಿದ್ದು, ತಮಿಳುನಾಡಿನಲ್ಲಿ ಏ.23ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಈ ಪೈಕಿ ಕೇವಲ ಪಶ್ಚಿಮ ಬಂಗಾಳದಲ್ಲಿ ಮಾತ್ರ ಎರಡು ಹಂತದಲ್ಲಿ ಚುನಾವಣೆ ನಡೆಯಲಿದೆ. ಎಲ್ಲಾ ಚುನಾವಣೆಗಳ ಫಲಿತಾಂಶ ಮೇ 4ರಂದು ಹೊರ ಬೀಳಲಿದೆ. ಚುನಾವಣೆ ದಿನಾಂಕ ಘೋಷಣೆಯಾಗಿರುವ ಈ ಐದೂ ರಾಜ್ಯಗಳಲ್ಲಿ ಮಾದರಿ ನೀತಿ ಸಂಹಿತೆ ತಕ್ಷಣದಿಂದಲೇ ಜಾರಿಗೆ ಬಂದಿದೆ.

**ಗರಿಗೆದರಿದ ಚಟುವಟಿಕೆ**

ಐದು ರಾಜ್ಯಗಳ ಚುನಾವಣೆಯು ಕೇವಲ ಆಯಾ ರಾಜ್ಯಗಳಿಗೆ ಮಾತ್ರ ಸೀಮಿತವಾಗಿರದೆ ಇಡೀ ದೇಶದ ರಾಜಕೀಯ ದಿಕ್ಕನ್ನೇ ಬದಲಿಸುವ ಸಾಮರ್ಥ್ಯ ಹೊಂದಿದೆ. ಚುನಾವಣಾ ದಿನಾಂಕ ಘೋಷಣೆಯಾಗುತ್ತಿದ್ದಂತೆ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳು ಚುರುಕು ಗೊಂಡಿವೆ. ಐದು ರಾಜ್ಯಗಳಿಂದ ಒಟ್ಟು 824 ಕ್ಷೇತ್ರಗಳಿವೆ. ಒಟ್ಟು 17.4 ಕೋಟಿ ಮತದಾರರಿದ್ದು, ಪಶ್ಚಿಮ ಬಂಗಾಳದಲ್ಲಿ 6.44 ಕೋಟಿ, ತಮಿಳುನಾಡಿನಲ್ಲಿ 5.67 ಕೋಟಿ, ಕೇರಳದಲ್ಲಿ 2.70 ಕೋಟಿ, ಅಸ್ಸಾಂನಲ್ಲಿ 2.50 ಕೋಟಿ ಹಾಗು ಪುದುಚೇರಿಯಲ್ಲಿ 9.44 ಲಕ್ಷ ಮತದಾರರಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ ಸತತ ನಾಲ್ಕನೇ ಅವಧಿಗೆ ಅಧಿಕಾರ ಹಿಡಿಯಲು ಪ್ರಯತ್ನಿಸುತ್ತಿದ್ದರೆ ಬಿಜೆಪಿಯು ಟಿಎಂಸಿ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನಿಸುತ್ತಿದೆ. ಈ ದೊಡ್ಡ ರಾಜ್ಯವು ಒಟ್ಟು 294 ವಿಧಾನಸಭಾ ಸ್ಥಾನಗಳನ್ನು ಹೊಂದಿದೆ.

ಇನ್ನು ಮತ್ತೊಂದು ಪ್ರಮುಖ ರಾಜ್ಯವಾದ ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಮೈತ್ರಿಕೂಟವು ಬಿಜೆಪಿ- ಎಐಎಡಿಎಂಕೆ ಮೈತ್ರಿಕೂಟವನ್ನು ಎದುರಿಸುತ್ತಿದೆ. ರಾಜ್ಯದಲ್ಲಿ ಒಟ್ಟು 234 ವಿಧಾನಸಭಾ ಕ್ಷೇತ್ರಗಳಿದ್ದು, ಈ ಬಾರಿ ನಟ ಮತ್ತು ರಾಜಕಾರಣಿ ವಿಜಯ್ ಅವರ ಟಿವಿಕೆ ಪಕ್ಷ ಕೂಡ ಅದೃಷ್ಟ ಪರೀಕ್ಷೆಗೆ ಇಳಿಯಲಿದೆ. ಇನ್ನು ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ, ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ ಸೆಣಸಲಿದ್ದು, ಸತತ ಮೂರನೇ ಬಾರಿಗೆ ಅಧಿಕಾರಕ್ಕೇರಲು ಪ್ರಯತ್ನ ಆರಂಭಿಸಿದೆ. ಬಿಜೆಪಿ ಕೂಡ ಕೇರಳದಲ್ಲಿ ಉತ್ತಮ ಪ್ರದರ್ಶನ ತೋರುವ ಭರವಸೆ ಇಟ್ಟುಕೊಂಡಿದೆ.

ಏತನ್ಮಧ್ಯೆ ತಮಿಳುನಾಡಿನಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆಗಳು ನಡೆಯುತ್ತಿವೆ. ಶತಾಯಗತಾಯ ಡಿಎಂಕೆಯನ್ನು ಮಣಿಸಲೇಬೇಕೆಂಬ ಪಣ ತೊಟ್ಟಿರುವ ಬಿಜೆಪಿ ತನ್ನ ಮುಂದಿರುವ ಯಾವ ಆಯ್ಕೆಗಳನ್ನೂ ಬಿಟ್ಟುಕೊಡುತ್ತಿಲ್ಲ. ಡಿಎಂಕೆ ಎದುರಾಳಿಯಾಗಿರುವ ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿರುವ ಬಿಜೆಪಿ ಚಿತ್ರನಟ ವಿಜಯ್ ಅವರ ಟಿವಿಕೆ ಪಕ್ಷವನ್ನೂ ತನ್ನತ್ತ ಸೆಳೆಯುವುದಕ್ಕೆ ಯತ್ನಿಸುತ್ತಿದೆ. ಅದರ ಭಾಗವಾಗಿ ಟಿವಿಕೆ ಜೊತೆಗೆ ಹಿಂಬಾಗಿಲ ಮೂಲಕ ಮಾತುಕತೆ ನಡೆಸುತ್ತಿದೆ ಎನ್ನಲಾಗಿದೆ.





> ನಮ್ಮ ಪ್ರಜಾಪ್ರಭುತ್ವ ಪ್ರಕ್ರಿಯೆ ನೋಡಲು ಮತ್ತು ಚುನಾವಣಾ ಪ್ರಕ್ರಿಯೆಗಳನ್ನು ಕಲಿಯಲು 20 ರಾಷ್ಟ್ರಗಳ ಚುನಾವಣಾ ಆಯೋಗಗಳು ಭಾರತಕ್ಕೆ ಬರುತ್ತವೆ. ಶಾಂತಿಯುತ ಹಾಗು ಪಾರದರ್ಶಕ ಚುನಾವಣೆ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.
>
> -ಜ್ಞಾನೇಶ್ ಕುಮಾರ್, ಕೇಂದ್ರ ಮುಖ್ಯ ಚುನಾವಣಾ ಆಯುಕ್ತ

### ಏ. 9ಕ್ಕೆ ರಾಜ್ಯದ 2 ಕ್ಷೇತ್ರಗಳಿಗೆ ಉಪ ಚುನಾವಣೆ

ದಾವಣಗೆರೆ ದಕ್ಷಿಣ ಹಾಗು ಬಾಗಲಕೋಟೆ ಕ್ಷೇತ್ರಗಳಿಗೆ ಏ. 9 ರಂದು ಉಪ ಚುನಾವಣೆ ನಡೆಯಲಿದೆ. ಶಾಮನೂರು ಶಿವಶಂಕರಪ್ಪ ಹಾಗು ಹೆಚ್.ವೈ.ಮೇಟಿ ಅವರ ನಿಧನದಿಂದ ಎರಡೂ ಕ್ಷೇತ್ರಗಳು ತೆರವಾಗಿವೆ.

ಮಾ. 16 ರಂದು ಅಧಿಸೂಚನೆ ಹೊರಡಿಸಲಾಗುವುದು. ನಾಮಪತ್ರ ಸಲ್ಲಿಸಲು ಮಾ. 23 ಕಡೆಯ ದಿನವಾಗಿದ್ದು, ಮಾ.24ರಂದು ಪರಿಶೀಲನೆ ನಡೆಯಲಿದೆ. ಉಮೇದುವಾರಿಕೆ ಹಿಂಪಡೆಯಲು ಮಾ. 26 ಕಡೆಯ ದಿನ. ಏ. 9ರಂದು ಮತದಾನ ನಡೆದು ಮೇ 4ಕ್ಕೆ ಫಲಿತಾಂಶ ಪ್ರಕಟವಾಗಲಿದೆ.

## ಸಿಲಿಂಡರ್ ಅಭಾವ ನೀಗಿಸಲು ಸಿ.ಎಂ. ಒತ್ತಾಯ

• ಪ್ರಜೋದಯ ವರದಿ

**ಬೆಂಗಳೂರು:** ಎಲ್‌ಪಿಜಿ ಅಭಾವವನ್ನು ನೀಗಿಸಲು ಹೊರ ದೇಶದಿಂದ ಅನಿಲ ಪೂರೈಕೆ ಪರ್ಯಾಯ ಮಾರ್ಗಕ್ಕೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.


ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನ ಮಂಡಲದಲ್ಲಿ ಸರ್ಕಾರದ ವತಿಯಿಂದ ಈ ಬಗ್ಗೆ ಈಗಾಗಲೇ ಉತ್ತರ ನೀಡಲಾಗಿದೆ. ಆಹಾರಕ್ಕಾಗಿ ಹೋಟೆಲ್‌ಗಳ ಮೇಲೆ ಅವಲಂಬಿತರಾಗುವ ಜನಸಂಖ್ಯೆ ಸಾಕಷ್ಟಿದೆ. ಹೋಟೆಲ್ ವ್ಯವಸ್ಥೆ ಸ್ಥಗಿತಗೊಂಡರೆ, ಜನಜೀವನ ಅಸ್ತವ್ಯಸ್ಥವಾಗುತ್ತದೆ. ಕೇಂದ್ರ ಸಚಿವ ಹರದೀಪಸಿಂಗ ಪುರಿ ಯವರು ಎಲ್‌ಪಿಜಿ ಪೂರೈಕೆಯಲ್ಲಿ ತೊಂದರೆಯಾಗದಂತೆ ನಿರ್ವಹಿಸುವ ಬಗ್ಗೆ ಭರವಸೆ ನೀಡಿದ್ದಾರೆ. ಕರ್ನಾಟಕದಲ್ಲಿ ಮಾತ್ರ ಎಲ್‌ಪಿಜಿ ಪೂರೈಕೆ ದೊಡ್ಡ ಸಮಸ್ಯೆಯಾಗಿದೆ ಎಂದು ಬಿಜೆಪಿಯ ನಾಯಕರು ಟೀಕಿ ಸುತ್ತಿರುವುದಕ್ಕೆ ಪ್ರತಿಕ್ರಿಯೆ ನೀಡಿ, ರಾಜ್ಯ ಬಿಜೆಪಿಯವರು ಮಾತನಾಡುವ ಬದಲು ಎಲ್‌ಪಿಜಿ ಹೆಚ್ಚಿನ ಸರಬರಾಜಿಗೆ ಕ್ರಮ ವಹಿಸಲಿ ಎಂದು ತಿಳಿಸಿದರು.

## ಲಕ್ಷ್ಮಿ ರಂಗನಾಥ ಸ್ವಾಮಿ ದರ್ಶನ ಪಡೆದ ಭವಾನಿ ರೇವಣ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಗುಲಸಿಂದ ಗ್ರಾಮದಲ್ಲಿ ಭಾನುವಾರ ನೆರವೇರಿದ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷೆ ಶ್ರೀಮತಿ ಭವಾನಿ ರೇವಣ್ಣ ಅವರು ಭಾಗವಹಿಸಿ ವಿಶೇಷ ಪೂಜೆ ಸಲ್ಲಿಸಿದರು.

ಮನೆ ದೇವರಾದ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ ಸನ್ನಿಧಿಗೆ ಸಂಜೆ 4 ಗಂಟೆಗೆ ಆಗಮಿಸಿದ ಅವರು 6ರ ವರೆಗೆ ದೇವಸ್ಥಾನದಲ್ಲೇ ಇದ್ದರು.



ಪ್ರತಿವರ್ಷ ಜಾತ್ರೆಯಲ್ಲಿ ಪಾಲ್ಗೊಳ್ಳುವುದು ವಾಡಿಕೆ. ಈ ವೇಳೆ ಸ್ಥಳೀಯರೊಂದಿಗೆ ಮಾತುಕತೆ ನಡೆಸಿದ ಅವರು ಯೋಗ ಕ್ಷೇಮ ವಿಚಾರಿಸಿದರು.

## ಬೇಲೂರು ಚನ್ನಕೇಶವ ದೇವಾಲಯಕ್ಕೆ ಬಂತು 20 ಸಿಲಿಂಡರ್

• ಪ್ರಜೋದಯ ವರದಿ

**ಬೇಲೂರು:** ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧ ಭೀತಿಯಿಂದ ಎಲ್‌ಪಿಜಿ ಸಿಲಿಂಡರ್ ಸಿಗದೆ ದಾಸೋಹಕ್ಕೆ ಅಡಚಣೆಯಾದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಡಳಿತ ಭಾನುವಾರ ಒಂದ ಬಾರಿಗೆ 20 ಸಿಲಿಂಡರ್‌ಗಳನ್ನು ತಲುಪಿಸುವ ಮೂಲಕ ಭಕ್ತರಿಗೆ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಿದೆ.

ಸಿಲಿಂಡರ್ ಖಾಲಿಯಾದ್ದರಿಂದ ಎರಡು ದಿನ ದಾಸೋಹ ಬಂದ್ ಮಾಡಲಾಗಿತ್ತು. ಎಚ್ಚೆತ್ತ ಅಧಿಕಾರಿಗಳು ಹೆಚ್‌ಪಿಸಿಎಲ್ ಅಧಿಕಾರಿಗಳೊಂದಿಗೆ ಚರ್ಚಿಸಿ ಸಿಲಿಂಡರ್‌ಗಳನ್ನು ಪೂರೈಸಿದ್ದಾರೆ. ಕೆಲ ದಿನಗಳಿಂದ ಗೃಹೋಪಯೋಗಿ ಸಿಲಿಂಡರ್‌ಗಳಿಗೆ ಮಾತ್ರ ಆದ್ಯತೆ ನೀಡುತ್ತಿದ್ದುದರಿಂದ ಮತ್ತು ವಾಣಿಜ್ಯಸಿಲಿಂಡರ್‌ಗಳ ಸರಬರಾಜು ಸ್ಥಗಿತಗೊಂಡಿದೆ.

ಮಾ.23 ರಿಂದ ಚನ್ನಕೇಶವಸ್ವಾಮಿ ಜಾತ್ರಾ ಮಹೋತ್ಸವ ಪ್ರಾರಂಭವಾಗುತ್ತಿದ್ದು, ಭಕ್ತರ ಸಂಖ್ಯೆ ಹೆಚ್ಚಲಿದೆ. ಸಾವಿರಾರು ಭಕ್ತರಿಗೆ ಅನ್ನ ದಾಸೋಹ ಕಲ್ಪಿಸಲು ಸಹ ಸಮಸ್ಯೆಯಾಗಿತ್ತು. ಆದರೆ, ಈ ವಿಷಯವಾಗಿ ಸಂಬಂಧಿಸಿದ ಅಧಿಕಾರಿಗಳು ಮತ್ತು ಗ್ಯಾಸ್ ಏಜೆನ್ಸಿ ಮಾಲೀಕರೊಂದಿಗೆ ಮಾತುಕತೆ ನಡೆಸಿ ಅಡುಗೆ ಅನಿಲದ ಸರಬರಾಜು ಮಾಡುವಂತೆ ಮನವಿ ಮಾಡಿದ ಹಿನ್ನಲೆಯಲ್ಲಿ ಕ್ರಮ ವಹಿಸಲಾಗಿದೆ.

ಚನ್ನಕೇಶವ ಸ್ವಾಮಿಗ್ಯಾಸ್ ಏಜೆನ್ಸಿ ಮಾಲೀಕ ದೇವು ಪ್ರಸಾದ್ ಅವರೇ 20 ಸಿಲಿಂಡರ್‌ಗಳನ್ನು ನೀಡಿದರು. ಮುಂದಿನ ದಿನಗಳಲ್ಲಿ ಅನ್ನ ದಾಸೋಹ ಸುಗಮವಾಗಿ ಮುಂದುವರಿಯಲು ಇನ್ನೂ 10 ರಿಂದ 20 ವಾಣಿಜ್ಯ ಸಿಲಿಂಡರ್‌ಗಳನ್ನು ಹೆಚ್ಚುವರಿಯಾಗಿ ಪೂರೈಸುವ ಸಾಧ್ಯತೆ ಇರುವುದಾಗಿ ತಿಳಿದು ಬಂದಿದ್ದು, ಈ ಮೂಲಕ ದಾಸೋಹಕ್ಕೆ ಆಗ ಬಹುದಾದ ದೊಡ್ಡ ತೊಂದರೆಯನ್ನು ನಿವಾರಿಸುವ ಮೂಲಕ ಭಕ್ತರ ಆತಂಕ ದೂರ ಮಾಡಲಾಗಿದೆ.

ದೇವು ಪ್ರಸಾದ್ ಅವರು ಮಾತನಾಡಿ, ಗ್ಯಾಸ್ ಸಿಲಿಂಡರ್‌ಗಳ ಅಭಾವದಿಂದ ಎರಡು ದಿನ ದಾಸೋಹ ಬಂದ್ ಆಗಿದ್ದು ಬೇಸರ ತರಿಸಿತ್ತು. ಆದರೆ ಈ ವಿಚಾರವಾಗಿ ಜಿಲ್ಲಾಡಳಿತದ ಸಹಕಾರ ಮತ್ತು ಹೆಚ್‌ಪಿಸಿಎಲ್ ಅಧಿಕಾರಿಗಳ ನೆರವಿನಿಂದ ದಾಸೋಹ ವ್ಯವಸ್ಥೆ ನಿರಂತರವಾಗಿ ನಡೆಯಲು ಕ್ರಮ ಕೈಗೊಳ್ಳಲಾಗಿದೆ ಎಂದರು. ದೇವಾಲಯದ ಸಿಬ್ಬಂದಿ ಸುಧಾಕರ್, ಗ್ಯಾಸ್ ಏಜೆನ್ಸಿಯ ಲತಾ ಮಂಜೇಶ್ವರಿ, ಕಿಟ್ಟಿ ಇದ್ದರು.



# ಜಾನುವಾರುಗಳ ಮೇವಿಗೆ ಕೊರತೆಯಾಗದಂತೆ ಮುನ್ನೆಚ್ಚರಿಕೆ

## 36 ವಾರಕ್ಕಾಗುವಷ್ಟು ಮೇವು ದಾಸ್ತಾನು | ಹೆಚ್ಚುತ್ತಲೇ ಇದೆ ಬಿಸಿಲ ಬೇಗೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲ ಬೇಗೆ ಹೆಚ್ಚುತ್ತಲೇ ಇದ್ದು ಜಾನುವಾರುಗಳಿಗೆ ಮೇವು ಹಾಗು ಕುಡಿಯುವ ನೀರಿಗೆ ತತ್ವಾರ ಎದುರಾಗುವ ಸಾಧ್ಯತೆ ಇದೆ.

ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳ ಸಭೆ ನಡೆಸಿ ಮೇವಿನ ಸಂಗ್ರಹಕ್ಕೆ ಆದ್ಯತೆ ನೀಡುವಂತೆ ಸೂಚನೆ ನೀಡಿದ್ದಾರೆ. ಗ್ರಾಮೀಣ ಭಾಗಗಳಲ್ಲಿ ನಿರ್ಮಿಸಿರುವ ತೊಟ್ಟಿಗಳಲ್ಲಿ ಸದಾಕಾಲ ನೀರು ಲಭ್ಯವಿರುವಂತೆ ಗ್ರಾಮ ಪಂಚಾಯಿತಿಗಳಿಗೆ ಸೂಚನೆ ನೀಡಲಾಗಿದೆ. ಜಿಲ್ಲಾಡಳಿತದ ಕಟ್ಟುನಿಟ್ಟಿನ ಸೂಚನೆ ಹಿನ್ನಲೆಯಲ್ಲಿ ಪಶುಪಾಲನಾ ಇಲಾಖೆ ಅಧಿಕಾರಿಗಳು ಮೇವು ಕೊರತೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿವೆ. ಜಿಲ್ಲೆಯಲ್ಲಿ ಸಾಕಷ್ಟು ಮೇವು ಸಂಗ್ರಹಣೆ ಮಾಡಲಾಗಿದ್ದು, ರೈತರು ಹಾಗು ಜಾನುವಾರು ಪಾಲಕರು ಆತಂಕ ಪಡುವ ಅಗತ್ಯವಿಲ್ಲವೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 5,61 ಲಕ್ಷ ಜಾನುವಾರು ಹಾಗು 3,31 ಲಕ್ಷ ಕುರಿ, ಮೇಕೆಗಳಿವೆ. ಅತಿಹೆಚ್ಚು ರಾಸುಗಳನ್ನು ಹೊಂದಿರುವ ಪಟ್ಟಿಯಲ್ಲಿ ಬೆಳಗಾವಿ ನಂತರ ಎರಡನೇ ಸ್ಥಾನವನ್ನು ಹಾಸನ ಪಡೆದಿದೆ. ಹೈನುಗಾರಿಕೆಗೆ ಜಾನುವಾರುಗಳು ಸಹಕಾರಿಯಾಗಿದ್ದು, ರೈತರ ಆರ್ಥಿಕ ಉತ್ತೇಜನಕ್ಕೆ ನೆರವಾಗಿದೆ. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಿ ಒಣಗಿದ ಹುಲ್ಲು ಹಾಗು ಹಸಿರು ಮೇವನ್ನು ಸಂಗ್ರಹಿಸಲಾಗಿದೆ. ಅಗತ್ಯವಿದ್ದರೆ ರೈತರಿಗೆ ಕಡಿಮೆ ದರದಲ್ಲಿ ಮೇವು ವಿತರಿಸಲು ವ್ಯವಸ್ಥೆ ಮಾಡಲಾಗಿದೆ. ಪಶುಪಾಲನಾ ಇಲಾಖೆಯ ಅಧಿಕಾರಿಗಳು ಗ್ರಾಮ ಮಟ್ಟದಲ್ಲಿ ಪರಿಶೀಲನೆ ನಡೆಸಿ ಮೇವು ಲಭ್ಯತೆ ಬಗ್ಗೆ ಮಾಹಿತಿ ಸಂಗ್ರಹಿಸಿದ್ದು, ತುರ್ತು ಪರಿಸ್ಥಿತಿ ಎದುರಾದರೆ ತಕ್ಷಣ ಕ್ರಮ ಕೈಗೊಳ್ಳಲು ಸಿದ್ಧತೆ ಮಾಡಿಕೊಂಡಿದ್ದಾರೆ.

**36 ವಾರಗಳಿಗೆ ಸಮಸ್ಯೆ ಇಲ್ಲ**

ಬೇಸಿಗೆ ಆರಂಭಕ್ಕೂ ಮೊದಲೇ ಪಶುಪಾಲನಾ ಇಲಾಖೆ ಅಧಿಕಾರಿಗಳು ಈ ಬಗ್ಗೆ ವರದಿ ತರಿಸಿಕೊಂಡಿದ್ದು, ಮುಂದಿನ 36 ವಾರಗಳಿಗೆ ಮೇವಿಗೆ ಕೊರತೆಯಾಗದಂತೆ ಎಚ್ಚರ ವಹಿಸಲಾಗಿದೆ. ಜಿಲ್ಲೆಯಲ್ಲಿ ಮೇವು ಬೆಳೆ ಬೆಳೆಸಲು ರೈತರಿಗೆ ಉತ್ತೇಜನ ನೀಡುವ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿದ್ದು, ಜಾನುವಾರುಗಳ ಆರೋಗ್ಯ ಕಾಪಾಡಲು ಪಶು ವೈದ್ಯಕೀಯ ಶಿಬಿರಗಳನ್ನು ನಡೆಸುವ ಯೋಜನೆಯೂ ರೂಪಿಸಲಾಗಿದೆ.

**5 ಸಾವಿರ ಮೇವಿನ ಬೀಜ ಕಿಟ್‌ಗೆ ಪ್ರಸ್ತಾವನೆ**

ಬೋರವೆಲ್ ಇರುವ ರೈತರು, ಸರ್ಕಾರಿ ಫಾರ್ಮ್ ಹೌಸ್, ಅರಣ್ಯ ಪ್ರದೇಶಗಳಲ್ಲಿ ಮೇವು ಬೆಳೆಯಲು ಕ್ರಮ ವಹಿಸಲಾಗಿದೆ. 5 ಸಾವಿರ ಮೇವಿನ ಬೀಜಗಳ ಕಿರು ಪೊಟ್ಟಣ ಕಲ್ಪಿಸುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಈ ಬಾರಿ ಮುಸುಕಿನ ಜೋಳದ ಬೀಜಗಳನ್ನು ಪಡೆಯುತ್ತಿಲ್ಲ. ಕಳೆದ ವರ್ಷ ಜೋಳಕ್ಕೆ ಬಿಳಿಸುಳಿ ರೋಗ ತಗುಲಿ ವ್ಯಾಪಕ ಹಾನಿಯುಂಟಾದ್ದರಿಂದ ಬದಲಿಗೆ ಮಲ್ಟಿ ಕಟ್ ಸರ್ಗಂ (ಹಲವಾರು ಬಾರಿ ಕತ್ತರಿಸಿ ಮೇವು ಪಡೆಯಬಹುದಾದ ಜೋಳದ ಜಾತಿ)ಗೆ ಬೇಡಿಕೆ ಸಲ್ಲಿಸಲಾಗಿದೆ. ಈ ಬೆಳೆ ಕೈಗೊಂಡರೆ ಅಂದಾಜು ನಾಲ್ಕರಿಂದ ಐದು ಬಾರಿ ಮೇವು ಪಡೆಯಬಹುದು. ಒಂದು ಎಕರೆಗೆ ಸುಮಾರು 35 ರಿಂದ 40 ಟನ್ ಹಸಿರುವ ಮೇವು ದೊರೆಯುವುದರಿಂದ ಇಲಾಖೆ ಈ ಬೆಳೆಗೆ ಪ್ರಾಶಸ್ತ್ಯ ನೀಡಿದೆ.

**ಪಶು ಸಖಿಯರಿಂದ ಸಮೀಕ್ಷೆ**

ಸದ್ಯದ ಪರಿಸ್ಥಿತಿಯಲ್ಲಿ ಮುಂದಿನ 3 ತಿಂಗಳ ವರೆಗೆ ಮೇವಿಗೆ ಕೊರತೆ ಇಲ್ಲ. ಅಷ್ಟರೊಳಗೆ ಮಳೆಯಾಗದೆ ಹುಲ್ಲು ಬೆಳೆಯದೆ ಇದ್ದರೆ ಪರಿಸ್ಥಿತಿ ಬಿಗಡಾಯಿಸಬಹುದು. ಹೀಗಾಗಿ ಪಶುಪಾಲನಾ ಇಲಾಖೆಯ ಪಶು ಸಖಿಯರಿಗೆ ಗ್ರಾಮಗಳಲ್ಲಿ ಸಮೀಕ್ಷೆ ನಡೆಸುವಂತೆ ಸೂಚಿಸಲಾಗಿದೆ. ಯಾವುದಾದರೂ ಗ್ರಾಮದಲ್ಲಿ ಮೇವಿಗೆ ಕೊರತೆ ಇದ್ದರೆ ಅಲ್ಲಿಗೆ ಮೇವು ಬೀಜ ಕಿಟ್ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಜಾನವಾರುಗಳಿಗೆ ಖಾಯಿಲೆಗಳು ತಗುಲದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಗ್ರಾಮ ಪಂಚಾಯಿತಿ ಸಹಕಾರದಡಿ ಕೈಗೊಳ್ಳಲಾಗುತ್ತಿದೆ.

> ಜಿಲ್ಲೆಯಲ್ಲಿ ಜಾನುವಾರುಗಳ ಮೇವು ಹಾಗು ಕುಡಿಯುವ ನೀರಿಗೆ ಸಮಸ್ಯೆಯಿಲ್ಲ. ಮುಂಜಾಗ್ರತಾ ಕ್ರಮವಾಗಿ 5 ಸಾವಿರ ಮೇವಿನ ಬೀಜಗಳ ಕಿಟ್ ಕಲ್ಪಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜಿಲ್ಲೆಯ ರೈತರು ಆತಂಕಪಡುವ ಅಗತ್ಯವಿಲ್ಲ.
>
> -ಬಿ.ಕೆ.ರಮೇಶ್, ಪಶುಪಾಲನಾ ಇಲಾಖೆ ಉಪನಿರ್ದೇಶಕ

## ತಾಯಿಯಾಗುವುದೆಂದರೆ ನಾಟಕ ಪ್ರದರ್ಶನ ಇಂದು

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗು ಮಕ್ಕಳ ರಕ್ಷಣಾ ಘಟಕದಿಂದ ನಗರದ ಹಾಸನಾಂಬ ಕಲಾಕ್ಷೇತ್ರ ದಲ್ಲಿ ಮಾ. 16ರ ಸೋಮವಾರ ದತ್ತು ಸ್ವೀಕಾರ ಮಾಹಿತಿ ಕಾರ್ಯಾಗಾರ ಹಾಗು ತಾಯಿಯಾಗುವುದೆಂದರೆ ನಾಟಕ ಪ್ರದರ್ಶನ ಹಮ್ಮಿಕೊಳ್ಳ ಲಾಗಿದೆ.

ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ರಂಗಭೂಮಿ ಕಲಾವಿದೆ ಪೂಜಾ ರಘುನಂದನ್ ಅವರು ತಾಯಿಯಾಗುವುದೆಂದರೆ ಎಂಬ ಏಕ ವ್ಯಕ್ತಿ ರಂಗ ಪ್ರಯೋಗವು ಪ್ರದರ್ಶನ ನೀಡಲಿದ್ದಾರೆ. ಕೃಷ್ಣಮೂರ್ತಿ ಕವತ್ತಾರ್ ನಿರ್ದೇಶನದ ನಾಟಕ ಇದಾಗಿದೆ.

# ಇಂಜಿನೀಯರ್‌ಗಳು ಕೃಷಿ ಕ್ಷೇತ್ರದತ್ತ ಆಸಕ್ತಿ ತೋರಲಿ

• ಪ್ರಜೋದಯ ವರದಿ

**ಹಾಸನ:** ಸದಾ ಒತ್ತಡದಲ್ಲೇ ಇರುವ ಇಂಜಿನೀಯರ್‌ಗಳು ಹೊಸ ಪ್ರಯತ್ನ ಗಳ ಮೂಲಕ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಉದ್ಯಮಿಗಳಾಗಬೇಕೆಂದು ಲೇಖಕಿ ಅನು ಚೌಡಿಪುರ ಅವರು ಸಲಹೆ ನೀಡಿದರು.

ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನಲ್ಲಿ ಮಿ ರೈಸ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ದರೆಗುಟ್ಟಿ ಮಳೆ ಸುರಿದು ಭಾಗ-2 ಪುಸ್ತಕದ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದರೆಗುಟ್ಟಿ ಮಳೆ ಸುರಿದು ಪುಸ್ತಕವು ಭಾರತೀಯ ಕೃಷಿ ಬದುಕಿನ ಸಂಕಷ್ಟ, ಸವಾಲು ಹಾಗು ಪರಿಹಾರ, ಭರವಸೆಗಳನ್ನು ಪ್ರತಿಬಿಂಬಿಸುತ್ತದೆ. ತಂತ್ರಜ್ಞಾನವು ಕೃಷಿಯ ಸಂಕಷ್ಟಗಳನ್ನು ದೂರ ಮಾಡಿ ರೈತರ ಬದುಕನ್ನು ಹಸನುಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕೃಷಿಯತ್ತ ಹಾಗು ರೈತರತ್ತ ಇಡೀ ದೇಶದ ಗಮನ ಸೆಳೆಯುವ ಆಸೆ ಇದೆ. ಈಗಾಗಲೇ ಕಾದಂಬರಿಯ ಮೊದಲ ಭಾಗವನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿ ದ್ದೇನೆ. ಸದ್ಯದಲ್ಲೇ ಎರಡನೇ ಭಾಗವೂ ಅನುವಾದಗೊಳ್ಳಲಿದೆ ಎಂದರು.



ಪ್ರಗತಿ ಪರ ಕೃಷಿಕ ಡಾ. ವಿನಾ ಯಕ ಸಿಂದಿಗೆರೆ ಅವರು ಮಾತನಾಡಿ, ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಸಿ ಕೊಳ್ಳುವುದರಿಂದ ಶ್ರಮ ಹಾಗು ಸಮಯ ಉಳಿತಾಯವಾಗುತ್ತದೆ. ಇಂಜಿನೀಯರಿಂಗ್ ಕಾಲೇಜಿನಲ್ಲಿ ಕೃಷಿ ಕುರಿತ ಕಾದಂಬರಿ ಬಿಡುಗಡೆ ಯಾಗುತ್ತಿರುವುದು ಔಚಿತ್ಯ ಪೂರ್ಣ ವೆಂದು ತಿಳಿಸಿದರು.

ಚಿಕ್ಕಮಗಳೂರಿನ ಸಾಯಿ


» ನಾಲ್ಕನೇ ಪುಟದಲ್ಲಿ


## ರಸ್ತೆಯಲ್ಲಿ ಅಡ್ಡಗಟ್ಟಿ ಕಾರ್ಮಿಕರ ಮೇಲೆ ಹಲ್ಲೆ

• ಪ್ರಜೋದಯ ವರದಿ

**ಹಾಸನ:** ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವಕರ ಮೇಲೆ ಐವರು ಕಳ್ಳರು ದಾಳಿ ಮಾಡಿ ರಿಪೀಸ್ ಪಟ್ಟಿಯಿಂದ ಹೊಡೆದು ಗಂಭೀರ ಗಾಯಗೊಳಿಸಿರುವ ಘಟನೆ ಹನುಮಂತಪುರದಲ್ಲಿ ನಡೆದಿದೆ.

ಹಿಮತ್ ಸಿಂಗ್ ಕಾ ಲಿನೆನ್ಸ್ ಗಾರ್ಮೆಂಟ್ಸ್ ಫ್ಯಾಕ್ಟರಿಯ ಕಾರ್ಮಿಕರಾದ ಕಿರಣ್ ಘೋಷ್ ಹಾಗು ಸೌರವ್ ಘೋಷ್ ಗಾಯಾಳುಗಳು. ಮಾ.13ರಂದು ರಾತ್ರಿ ಪಿರುಮೇನಹಳ್ಳಿಯ ತಮ್ಮ ರೂಮ್‌ನಿಂದ ದಿನಸಿ ಸಾಮಾಗ್ರಿ ತರಲು ಹನುಮಂತಪುರಕ್ಕೆ ತೆರಳಿದ್ದ ಅವರು ರಸ್ತೆಬದಿ ನಡೆದುಕೊಂಡು ಬರುತ್ತಿದ್ದಾಗ ಎರಡು ಸ್ಪ್ಲೆಂಡರ್ ಬೈಕ್‌ನಲ್ಲಿ ಬಂದ ಐವರು ಅಪರಿಚಿತರು ಅಡ್ಡಗಟ್ಟಿ ಹಣ ಹಾಗು ಮೊಬೈಲ್ ಕೊಡುವಂತೆ ಒತ್ತಾಯಿಸಿದ್ದಾರೆ. ಇಬ್ಬರೂ ಪ್ರತಿರೋಧ ತೋರಿದ್ದರಿಂದ ಮರದ ರೀಪೀಸ್ ಪಟ್ಟಿಯಿಂದ ಬಲವಾಗಿ ಹೊಡೆದಿದ್ದಾರೆ. ಈ ವೇಳೆ ಫ್ಯಾಕ್ಟರಿಯ ಮತ್ತೊಬ್ಬ ಕಾರ್ಮಿಕ ಬರುತ್ತಿದ್ದಂತೆ ಬೈಕ್ ಹತ್ತಿ ಓಡಿ ಹೋಗಿದ್ದಾರೆ. ಎರಡು ಮೊಬೈಲ್, 1030 ರೂ.ಗಳನ್ನು ದೋಚಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರೋಡ್ ರೋಲರ್‌ಗೆ ಬೈಕ್ ಡಿಕ್ಕಿ : ವ್ಯಕ್ತಿ ಸಾವು

• ಪ್ರಜೋದಯ ವರದಿ

**ಅರಸೀಕೆರೆ:** ರೋಡ್ ರೋಲರ್‌ಗೆ ಡಿಕ್ಕಿಯಾಗಿ ಬೈಕ್ ಹಿಂಬದಿ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಾರಶೆಟ್ಟಿಹಳ್ಳಿ ಮಂಗಳಾಪುರ ಗೇಟ್ ಸಮೀಪ ಶನಿವಾರ ನಡೆದಿದೆ.

ದುದ್ದ ಹೋಬಳಿ ಚಾಮರಾಜಪುರ ಗ್ರಾಮದ ಚಿರಂಜೀವಿ ಮೃತರು. ಕೆಲಸದ ನಿಮಿತ್ತ ತಿಪಟೂರಿಗೆ ಸ್ನೇಹಿತ ಸುನೀಲ್ ಜೊತೆಗೆ ಹೋಗುತ್ತಿದ್ದಾಗ ಅವಘಡ ಸಂಭವಿಸಿದೆ. ತಿಪಟೂರು ರಸ್ತೆಯ ಮಂಗಳಾಪುರ ಗೇಟ್ ಸಮೀಪ ಹೋಗುತ್ತಿದ್ದಾಗ ರೋಡ್ ರೋಲರ್‌ಗೆ ಬೈಕ್ ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾಗಿ ಚಿರಂಜೀವಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರ ಗಾಯಗೊಂಡಿರುವ ಸುನೀಲ್‌ನನ್ನು ಹಿಮ್ಸ್‌ಗೆ ದಾಖಲಿಸಲಾಗಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದಾಖಲೆ ಒದಗಿಸದ ರೈಲ್ವೆ ಇಲಾಖೆ | ಯಥಾಸ್ಥಿತಿ ಕಾಪಾಡುವಂತೆ ಪೊಲೀಸರ ಸೂಚನೆ

# ಒಂದು ಎಕರೆ ಜಾಗಕ್ಕಾಗಿ ಮೂರು ಇಲಾಖೆಗಳ ಹಗ್ಗ ಜಗ್ಗಾಟ

**ಅಲೀಲ್ ಅಕ್ಬರ್**

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಹೃದಯ ಭಾಗದಲ್ಲಿರುವ ಒಂದು ಎಕರೆ ಭೂಮಿಗಾಗಿ ಮೂರು ಇಲಾಖೆಗಳ ನಡುವೆ ಕಿತ್ತಾಟ ನಡೆಯುತ್ತಿದ್ದು ಭಾರೀ ಕುತೂಹಲ ಕೆರಳಿಸಿದೆ.

ಲಕ್ಷ್ಮಿಪುರಂ ಬಡಾವಣೆಯ ಸರ್ವೆ ನಂಬರ್ 191ರಲ್ಲಿ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಹಾಗು ತಾಲ್ಲೂಕು ಕಚೇರಿಗೆ ಕೇವಲ ಕೂಗಳತೆ ದೂರದಲ್ಲಿರುವ ಸುಮಾರು ಒಂದು ಎಕರೆ ಭೂಮಿಗಾಗಿ ಇಲಾಖೆಗಳು ಪೈಪೋಟಿ ನಡೆಸುತ್ತಿವೆ.

2024ರ ಆರಂಭದಲ್ಲಿ ರೈಲ್ವೆ ಇಲಾಖೆ ಈ ಭೂಮಿಯಲ್ಲಿ ನೌಕರರಿಗಾಗಿ ವಸತಿ ಸಮುಚ್ಚಯ ನಿರ್ಮಾಣಕ್ಕೆ ಮುಂದಾಗಿತ್ತು. ಪುರಸಭೆಗೆ ಸೇರಿದ ಜಾಗದಲ್ಲಿ ರೈಲ್ವೆ ಇಲಾಖೆ ಭೂ ಒತ್ತುವರಿ ಮಾಡಿ ಕಟ್ಟಡ ನಿರ್ಮಿಸುತ್ತಿದೆ ಎಂಬ ಮಾಹಿತಿ ಗೊತ್ತಾಗುತ್ತಿದ್ದಂತೆ ಎಚ್ಚೆತ್ತ ಪುರಸಭೆ ಅಧಿಕಾರಿಗಳು ರೈಲ್ವೆ ಇಲಾಖೆಗೆ ನೋಟೀಸ್ ನೀಡಿ ದಾಖಲಾತಿ ಹಾಜರು ಪಡಿಸುವಂತೆ ಕೋರಿತ್ತು. ಆದರೆ, ಪುರಸಭೆ ಜಾರಿ ಮಾಡಿದ ಮೂರು ನೋಟೀಸ್‌ಗೆ ರೈಲ್ವೆ ಇಲಾಖೆಯಿಂದ ಯಾವುದೇ ಉತ್ತರ ಬಾರದ ಹಿನ್ನಲೆಯಲ್ಲಿ ಪ್ರಕ್ರಿಯೆ ಅಲ್ಲಿಗೆ ಸ್ಥಗಿತಗೊಂಡಿತ್ತು.

ಈ ಮಧ್ಯೆ ಕಂದಾಯ ಇಲಾಖೆಯು ನಮಗೆ ಸರ್ವೆ ನಂಬರ್ 191ರಲ್ಲಿ ಭೂಮಿ ಮಂಜೂರು ಮಾಡಿದೆ ಎಂದು ನಾರಾಯಣ ಗುರು ಸೇವಾ ಸಂಘ ಅದೇ ಜಾಗಕ್ಕೆ ತಂತಿ ಬೇಲಿ ಹಾಕಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿತ್ತು. ಆದರೆ, ರಾತ್ರೋರಾತ್ರಿ ಕಾರ್ಯಾಚರಣೆ ನಡೆಸಿದ ರೈಲ್ವೆ ಇಲಾಖೆ ತಂತಿ ಬೇಲಿ ತೆರವುಗೊಳಿಸಿ ರೈಲ್ವೆ ಇಲಾಖೆಗೆ ಸೇರಿದ ಭೂಮಿ ಇಲ್ಲಿ ಅತಿಕ್ರಮ ಪ್ರವೇಶ ನಿಷೇಧಿಸಿದೆ ಎಂಬ ಫಲಕ ಅಳವಡಿಸಿತು. ಆದರೆ, ಮರುದಿನ ಮತ್ತೆ ತಂತಿ ಬೇಲಿ ನಿರ್ಮಾಣಕ್ಕೆ ನಾರಾಯಣ ಸೇವಾ ಸಂಘದ ಸದಸ್ಯರು ಮುಂದಾಗಿದ್ದರು. ಈ ವೇಳೆ ರೈಲ್ವೆ ಸಿಬ್ಬಂದಿ, ಸಂಘದ ಸದಸ್ಯರ ನಡುವೆ ವಾಗ್ವಾದ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿತ್ತು. ಈ ವೇಳೆ ಸಕಾಲಕ್ಕೆ ಆಗಮಿಸಿದ ವೃತ್ತ ನಿರೀಕ್ಷಕ ವನರಾಜು ಎರಡು ತಂಡಗಳಿಗೆ ಎಚ್ಚರಿಕೆ ನೀಡಿ ಪರಿಸ್ಥಿತಿ ತಿಳಿಗೊಳಿಸಿ, ತಮ್ಮ ದಾಖಲೆಗಳನ್ನು ಠಾಣೆಗೆ ತರುವಂತೆ ತಿಳಿಸಿದ್ದರು.


» ನಾಲ್ಕನೇ ಪುಟದಲ್ಲಿ




> ಸರ್ವೆ ನಂ. 191ರ ಭೂಮಿ ಪುರಸಭೆಗೆ ಸೇರಿದೆ ಎಂಬುದರಲ್ಲಿ ಯಾವ ಅನುಮಾನವಿಲ್ಲ. ಹಳೇ ಕಡತಗಳಲ್ಲಿ ಈ ದಾಖಲೆಗಳು ಲಭ್ಯವಿದೆ. ಪುರಸಭೆ ಅಧಿಕಾರಿಗಳು ಇಚ್ಛಾಶಕ್ತಿ ಪ್ರದರ್ಶಿಸಿದರೆ ಭೂಮಿಯನ್ನು ಪುರಸಭೆಗೆ ಹಸ್ತಾಂತರಿಸಿಕೊಳ್ಳ ಬಹುದಾಗಿದೆ.
>
> -ಸದಾಶಿವ ಭಂಡಾರಿ, ಪುರಸಭೆ ಮಾಜಿ ಅಧ್ಯಕ್ಷ

> 2005ರಲ್ಲೇ ನಾರಾಯಣ ಗುರು ಸೇವಾ ಸಂಘಕ್ಕೆ 10 ಗುಂಟೆ ಜಾಗ ಕಂದಾಯ ಇಲಾಖೆಯಿಂದ ಮಂಜೂರಾಗಿದೆ. ಸದ್ಯ ಕಟ್ಟಡ ನಿರ್ಮಾಣಕ್ಕೆ ನಾವು ಮುಂದಾಗಿರುವ ವೇಳೆ ರೈಲ್ವೆ ಅಧಿಕಾರಿಗಳು ತಕರಾರರು ಮಾಡುತ್ತಿದ್ದಾರೆ.
>
> -ಭಾಸ್ಕರ್, ನಾರಾಯಣ ಗುರು ಸೇವಾ ಸಂಘ ಅಧ್ಯಕ್ಷ

> ಸರ್ವೆ ನಂ. 191ರಲ್ಲಿನ ಒಂದು ಎಕರೆ ಭೂಮಿಯನ್ನು 1933ರಲ್ಲಿ ಮೈಸೂರು ರಾಜರ ಆಡಳಿತ ಉದ್ಯಾನವಕ್ಕಾಗಿ ಮೀಸಲಿಟ್ಟಿರುವ ದಾಖಲಾತಿ ನಮ್ಮ ಬಳಿ ಇದೆ. ಕಂದಾಯ ಹಾಗು ರೈಲ್ವೆ ಇಲಾಖೆ ಮಧ್ಯ ಪ್ರವೇಶಿಸುವಂತಿಲ್ಲ.
>
> -ಮಹೇಶ್ವರಪ್ಪ, ಪುರಸಭೆ ಮುಖ್ಯಾಧಿಕಾರಿ

## ಬಿಸಿಎಂ ವಸತಿ ನಿಲಯ ವ್ಯವಸ್ಥಾಪಕ ಆತ್ಮಹತ್ಯೆ

• ಪ್ರಜೋದಯ ವರದಿ

**ಹಾಸನ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಚನ್ನರಾಯ ಪಟ್ಟಣದ ವಸತಿ ನಿಲಯದ ವ್ಯವಸ್ಥಾಪಕ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಡೆದಿದೆ.

ನಗರದ ದಾಸರಕೊಪ್ಪಲು ನಿವಾಸಿ ಲೋಕೇಶ್ (45) ಮೃತರು. ತಮ್ಮ ನಿವಾಸದಲ್ಲಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಸನದ ಗುಡ್ಡೇನಹಳ್ಳಿಯ ಎರಡು ವಸತಿ ನಿಲಯಗಳಲ್ಲಿ ವಾರ್ಡನ್ ಆಗಿ ಕರ್ತವ್ಯ ನಿರ್ವಹಿಸಿದ್ದ ಅವರು ಇತ್ತೀಚೆಗೆ ಬಡ್ತಿಯೊಂದಿಗೆ ಚನ್ನರಾಯ ಪಟ್ಟಣಕ್ಕೆ ವರ್ಗವಾಗಿದ್ದರು. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


CMYK CMYK CMYK CMYK

# ಒಡಿಶಾ ಕಾಂಗ್ರೆಸ್ ಶಾಸಕರಿಗೆ ಲಂಚ ನೀಡಲು ಪ್ರಯತ್ನ: ಡಿ.ಕೆ.ಶಿ.

• ಪ್ರಜೋದಯ ವರದಿ



**ಬೆಂಗಳೂರು:** ರಾಜ್ಯಸಭೆ ಚುನಾವಣೆಯಲ್ಲಿ ಆಪರೇಷನ್ ಕಮಲ ಭೀತಿಯಿಂದ ನಮ್ಮ ಆತಿಥ್ಯದಲ್ಲಿರುವ ಒಡಿಶಾದ ಕಾಂಗ್ರೆಸ್ ಶಾಸಕರಿಗೆ ಲಂಚ ನೀಡಲು ಪ್ರಯತ್ನಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬಿಜೆಪಿ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಬಿಜೆಪಿ ಆಪರೇಷನ್ ಕಮಲ ಮಾಡಲು ಯೋಜನೆ ರೂಪಿಸಿದೆ. ಮಾ.16ರ ಸೋಮವಾರ ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಮುಂಚಿತವಾಗಿ ಇಲ್ಲಿಗೆ ಕರೆತರಲಾದ ಒಡಿಶಾ ಶಾಸಕರಿಗೆ ತಲಾ ಐದು ಕೋಟಿ ರೂ. ನೀಡಲಾಗುತ್ತಿದೆ ಎಂದರು.

ಒಡಿಶಾ ಕಾಂಗ್ರೆಸ್ ಶಾಸಕರನ್ನು ಖರೀದಿಸಲು ಯತ್ನಿಸಿದ ಇಬ್ಬರು ವ್ಯಕ್ತಿಗಳನ್ನು ಖಾಸಗಿ ರೆಸಾರ್ಟ್‌ನಲ್ಲಿ ಬಂಧಿಸಲಾಗಿದೆ. ಹಣ ಹಂಚಲು ನಾಲ್ವರು ಬಂದಿದ್ದಾರೆ. ಸುರೇಶ್ ಎಂಬ ಸ್ಥಳೀಯ ವ್ಯಕ್ತಿ ಅವರಿಗೆ ಸಹಾಯ ಮಾಡಿದ್ದಾರೆ. ಅವರು ಶಾಸಕರನ್ನು ಆನ್‌ಲೈನ್‌ನಲ್ಲಿ ಸಂಪರ್ಕಿಸಿದ್ದಾರೆ. ಬೆಳಿಗ್ಗೆ ಅವರು ನಮ್ಮ ಶಾಸಕರನ್ನು ಕರೆದೊಯ್ದರು. ಪ್ರತಿ ಮತಕ್ಕೆ 5 ಕೋಟಿ ರೂ. ನೀಡುವುದಾಗಿ ಹೇಳಿರುವುದಾಗಿ ನಮ್ಮ ಶಾಸಕರು ನಮಗೆ ನೀಡಿದರು. ಕುದುರೆ ವ್ಯಾಪಾರಕ್ಕೆ ಬೆಂಬಲ ನೀಡುವುದಿಲ್ಲವೆಂದು ಕಾಂಗ್ರೆಸ್ ಶಾಸಕರು ತಿಳಿಸಿದ್ದಾರೆಂದು ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಅವರ ಬಳಿಯಿದ್ದ ಚೆಕ್ ಮತ್ತು ಎಲ್ಲವನ್ನೂ ವಶಪಡಿಸಿಕೊಳ್ಳಬೇಕು. ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗುವುದು. ಅದರ ನಂತರ, ಅಗತ್ಯವಿರುವ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸಿಕ್ಕಿಬಿದ್ದವರು ಒಂದೇ ಉದ್ದೇಶಕ್ಕಾಗಿ ಬಂದಿದ್ದೇವೆಂದು ಒಪ್ಪಿಕೊಂಡಿದ್ದಾರೆ. ಇತರರನ್ನು ಪತ್ತೆ ಹಚ್ಚುವ ಪ್ರಕ್ರಿಯೆ ನಡೆಯುತ್ತಿದೆ. ಇದು ಕರ್ನಾಟಕದಲ್ಲಿ ಬಿಜೆಪಿ ಸ್ನೇಹಿತರು ನಡೆಸಿದ ಮಹಾನ್ ಆಪರೇಷನ್ ಕಮಲ ಎಂದು ವಾಗ್ದಾಳಿ ನಡೆಸಿದರು.


ಮೂಲವೊಂದು ಛಾಯಾಚಿತ್ರ ಮತ್ತು ಖಾಲಿ ಚೆಕ್‌ಗಳನ್ನು ಸಹ ಹಂಚಿಕೊಂಡಿದೆ. ಅವರು ಖಾಲಿ ಚೆಕ್ ನೀಡುವ ಮೂಲಕ ಕಾಂಗ್ರೆಸ್ ಶಾಸಕರೊಂದಿಗೆ ಮಾತುಕತೆ ನಡೆಸಲು ಪ್ರಯತ್ನಿಸಿದ್ದಾರೆ. ಇಬ್ಬರನ್ನೂ ಹಿಡಿದು ಬಿಡದಿ ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದರು.

ಒಡಿಶಾದಲ್ಲಿ ರಾಜ್ಯಸಭಾ ಚುನಾವಣೆ ಸೋಮವಾರ ನಡೆಯಲಿದೆ. ಬಿಜೆಪಿ ಮತ್ತೊಬ್ಬ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಇದು ಕುದುರೆ ವ್ಯಾಪಾರದ ಶಂಕೆಯನ್ನು ಹುಟ್ಟುಹಾಕಿದೆ. ಕಾಂಗ್ರೆಸ್ ಮತ್ತು ಬಿಜು ಜನತಾದಳ ಒಬ್ಬ ಅಭ್ಯರ್ಥಿಯನ್ನು ಕಣಕ್ಕಿಳಿಸಿವೆ.

# ಜನ ಜೀವನದ ಮೇಲೆ ಘೋರ ಪರಿಣಾಮ ಬೀರಿದ ಯುದ್ಧ

## ಬೆದರಿಕೆಗೆ ಬಗ್ಗದ ಇರಾನ್ | ಅಬ್ರಹಾಂ ಲಿಂಕನ್ ನೌಕೆ ಬಳಸುತ್ತಿರುವ ಅಮೇರಿಕಾ

• ಪ್ರಜೋದಯ ವರದಿ



**ವಾಸಿಂಗ್ಟನ್:** ಅಮೇರಿಕಾ, ಇಸ್ರೇಲ್ ಮತ್ತು ಇರಾನ್ ನಡುವೆ ಘೋರ ಯುದ್ಧ ನಡೆಯುತ್ತಿದೆ. ನೂರಾರು ಜನರು ಪ್ರಾಣ ಕಳೆದುಕೊಂಡರೆ ಜಾಗತಿಕ ತೈಲ ಸರಬರಾಜು ಅಸ್ತವ್ಯಸ್ತಗೊಂಡು ಪ್ರಪಂಚದ ವ್ಯಾಪಾರ ಜೀವನದ ಮೇಲೆ ಪರಿಣಾಮ ಬೀರುತ್ತಿದೆ. ಅಮೇರಿಕಾ ಮತ್ತು ಇಸ್ರೇಲ್ ದಾಳಿಗಳಿಗೆ ಇರಾನ್ ಪ್ರತಿದಾಳಿ ನಡೆಸುತ್ತಿದೆ.

ಪರಮಾಣು ಒಪ್ಪಂದಕ್ಕೆ ಒಪ್ಪದ ಇರಾನ್‌ನ ಮಾಜಿ ಪರಮೋಚ್ಚ ನಾಯಕ ಅಯತೋಲ್ಲಾ ಖಮೇನಿಯ ಹತ್ಯೆ ಮಾಡಿದ ಅಮೇರಿಕಾ ಶತಾಯ ಗತಯ ಇರಾನ್ ಅನ್ನು ಮಣಿಸುವ ಪಣ ತೊಟ್ಟಿದೆ. ಈ ಯುದ್ಧಕ್ಕೆ ಅಮೇರಿಕಾ ತನ್ನ ಬೃಹತ್ ಯುದ್ಧನೌಕೆ ಅಬ್ರಹಾಂ ಲಿಂಕನ್ ಅನ್ನು ಬಳಸುತ್ತಿದೆ.ಇಲ್ಲಿಂದಲೇ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸುತ್ತಿದೆ. ಶತ್ರು ದಾಳಿಯನ್ನು ಹೊಡೆದುರುಳಿಸುವುದು ರಕ್ಷಣೆಯ ಕಾರ್ಯನಿರ್ವಹಿಸುತ್ತಿದೆ.

ಇದು ವಿಮಾನವಾಹಕ ನೌಕೆಯಾಗಿದ್ದು, ಪರಮಣು ರಿಯಾಕ್ಟರ್‌ಗಳಿಂದ ಕಾರ್ಯನಿರ್ವಹಿಸುತ್ತಿದ್ದು ಹತ್ತಾರು ವರ್ಷ ಇಂಧನ ಮರುಪೂರೈಕೆ ಇಲ್ಲದೇ ಸಮುದ್ರದಲ್ಲಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಯುದ್ಧ ವಿಮಾನಗಳು, ಮುನ್ನೆಚ್ಚರಿಕೆ ವಿಮಾನಗಳು, ಎಲೆಕ್ಟ್ರಾನಿಕ್ ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಸೇರಿ ಏಕ ಕಾಲಕ್ಕೆ 80 ವಿಮಾನಗಳು ಹಾರ ಬಹುದಾದ ವಿಶಾಲವಾದ ತೇಲುವ ವಾಯುನೆಲೆಯನ್ನು ಹೊಂದಿದೆ. ವಿದ್ಯುತ್ ಉತ್ಪಾದನೆ, ಭದ್ರತೆ ಮತ್ತು ನೌಕಾ ಭದ್ರತೆಯಲ್ಲಿ ಅದನ್ನು ಪ್ರಮುಖವಾಗಿ ಬಳಸಲಾಗುತ್ತದೆ. ಮಿತ್ರ ರಾಷ್ಟ್ರಗಳ ರಕ್ಷಣೆ, ಯುದ್ಧದಲ್ಲೂ ಅಮೇರಿಕಾ ಅದನ್ನು ಬಳಸುತ್ತದೆ. 1989ರಲ್ಲಿ ದೇಶದ 16ನೇ ಅಧ್ಯಕ್ಷ ಅಬ್ರಹಾಂ ಲಿಂಕನ್ ಸ್ಮರಣಾರ್ಥ ಈ ನೌಕೆಯನ್ನು ಅಮೇರಿಕಾ ನಿರ್ಮಿಸಿದೆ.

ಈ ವಿಮಾನ ವಾಹಕ ನೌಕೆಯಲ್ಲಿ ಎಫ್-35ಸಿ ಲೈಟ್ನಿಂಗ್ ಜೆಟ್‌ಗಳು ಮತ್ತು ಹೆಲಿಕಾಪ್ಟರ್‌ಗಳು ಸೇರಿ 9 ಅತ್ಯಾಧುನಿಕ ಯುದ್ಧ ವಿಮಾನಗಳ ಸಮೂಹ ಇದೆ. ಇದು ಪರಮಾಣು ಚಾಲಿತವಾಗಿದ್ದು, 2013-2017ರವರೆಗೆ ಪ್ರಮುಖ ಇಂಧನ ತುಂಬುವಿಕೆ ಮತ್ತು ಸಂಕೀರ್ಣ ಕೂಲಂ ಕುಷ ಪರೀಕ್ಷೆಗೆ ಒಳಗಾಗಿದೆ. ಇಂಧನ ತುಂಬಿಸದೆ 20 ವರ್ಷಗಳ ಕಾಲ ಸಮುದ್ರದಲ್ಲಿ ಕಾರ್ಯ ನಿರ್ವಹಿಸುತ್ತದೆ. 162 ಕ್ಷಿಪಣಿಗಳು, 116 ರೋಲಿಂಗ್ ಏರ್‌ಫ್ರೇಮ್ ಕ್ಷಿಪಣಿ ವ್ಯವಸ್ಥೆ ಹೊಂದಿದ್ದು, ಭೂಮಿ, ಆಗಸದಿಂದ ಒದಗುವ ಅಪಾಯದ ರಕ್ಷಣೆಗಾಗಿ ಫ್ಯಾಲ್ಯಾಂಕ್ಸ್ ಕ್ಲೋಸ್ ಇನ್ ವೆಪನ್ ರಕ್ಷಣಾ ವ್ಯವಸ್ಥೆ ಸೇರಿ ಸುಧಾರಿತ ವ್ಯವಸ್ಥೆಗಳನ್ನು ಹೊಂದಿದೆ.

**ಕಾರ್ಯಾಚರಣೆಯ ಇತಿಹಾಸ**

ಕೊಲ್ಲಿ ಯುದ್ಧ, ಆಪರೇಷನ್ ಇರಾಕಿ ಫ್ರೀಡಂ ಮತ್ತು ಮಧ್ಯಪ್ರಾಚ್ಯದಲ್ಲಿನ ಕಾರ್ಯಾಚರಣೆಗಳು ಸೇರಿ ಬಹು ಕಾರ್ಯಾಚರಣೆಗಳಲ್ಲಿ ತೊಡಗಿಸಿಕೊಂಡಿತ್ತು. ಈ ವರ್ಷದ ಆರಂಭದಿಂದ ಓಮಾನ್ ಕೊಲ್ಲಿಯಲ್ಲಿ ಸಕ್ರಿಯವಾಗಿದೆ. ಅಮೇರಿಕಾದ ಈ ಅತ್ಯಾಧುನಿಕ ಯುದ್ಧನೌಕೆಯು ಸುಮಾರು 5,000 ಸಿಬ್ಬಂದಿ ಹೊಂದಿದ್ದು, 4 ಎಕರೆಗಳಿಗಿಂತ ಹೆಚ್ಚು ವಿಸ್ತಾರವಾದ ಫ್ಲೈಟ್ ಡೆಕ್ ಹೊಂದಿದೆ. ಗಂಟೆಗೆ 30 ನಾಟಿಕಲ್ ಮೈಲಿಗಿಂತಲೂ ಅಧಿಕ ವೇಗದಲ್ಲಿ ಚಲಿಸಬಲ್ಲದು.

**ಯುದ್ಧ ನೌಕೆ ರವಾನೆಗೆ ಟ್ರಂಪ್ ಕರೆ**

ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಮುಂದುವರಿದಂತೆ ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಾರಿಗೆ ಸುರಕ್ಷಿತಗೊಳಿಸಲು ಯುದ್ಧ ನೌಕೆಗಳನ್ನು ರವಾನಿಸುವಂತೆ ಮಿತ್ರ ರಾಷ್ಟ್ರಗಳಿಗೆ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕರೆ ನೀಡಿದ್ದಾರೆ.

ಅಮೇರಿಕಾ-ಇಸ್ರೇಲ್ ಮತ್ತು ಇರಾನ್ ನಡುವಣ ಸಂಘರ್ಷ ಮೂರನೇ ವಾರಕ್ಕೆ ಕಾಲಿಟ್ಟಿದೆ. ಈ ಮೊದಲು ಹೊರ್ಮುಜ್ ಜಲಸಂಧಿ ಮೂಲಕ ತೈಲ ನೌಕೆಗಳು ಸಾಗಲು ಅಡ್ಡಿಪಡಿಸಿದರೆ ಇರಾನ್‌ನ ಖಾರ್ಗ್ ದ್ವೀಪದಲ್ಲಿರುವ ತೈಲ ಘಟಕಗಳನ್ನು ಗುರಿಯಾಗಿಸಿ ದಾಳಿ ನಡೆಸುವುದಾಗಿ ಟ್ರಂಪ್ ಬೆದರಿಕೆ ಒಡ್ಡಿದ್ದರು. ಅದಕ್ಕೆ ಪ್ರತಿದಾಳಿ ನಡೆಸುವುದಾಗಿ ಇರಾನ್ ಎಚ್ಚರಿಸಿದೆ. ಅಲ್ಲದೆ ಯುಎಇನಲ್ಲಿರುವ 3 ಪ್ರಮುಖ ಬಂದರುಗಳಲ್ಲಿ ನಾಗರಿಕರನ್ನು ಸ್ಥಳಾಂತರಿಸುವಂತೆ ಬೆದರಿಕೆ ಒಡ್ಡಿದೆ.

ಯುಎಇ ನೆಲೆಯನ್ನು ಬಳಸಿಕೊಂಡು ಅಮೇರಿಕಾ ತನ್ನ ವಿರುದ್ಧ ದಾಳಿ ನಡೆಸುತ್ತಿದ್ದು, ತಕ್ಕ ಪರಿಣಾಮ ಎದುರಿಸಬೇಕಾದಿತು ಎಂದು ತಿರುಗೇಟು ನೀಡಿದೆ. ದುಬೈ ಸಮೀಪದಿಂದ ಅಮೇರಿಕಾ ದಾಳಿ ನಡೆಸಿರುವುದಾಗಿ ಇರಾನ್ ಆರೋಪಿಸಿದೆ. ಇದು ತುಂಬಾ ಅಪಾಯಕಾರಿ ನಿಲುವಾಗಿದೆ ಎಂದು ಹೇಳಿದೆ. ಅಮೇರಿಕಾದ ಮೂಲಸೌಕರ್ಯಗಳ ಮೇಲೆ ಪ್ರತಿದಾಳಿ ನಡೆಸುವುದಾಗಿ ಇರಾನ್ ಮಿಲಿಟರಿ ಎಚ್ಚರಿಸಿದೆ.

ಏತನ್ಮಧ್ಯೆ, ತೈಲ ಬೆಲೆ, ಪೂರೈಕೆಗಳ ಬಗ್ಗೆ ಜಾಗತಿಕ ಆತಂಕ ಹೆಚ್ಚುತ್ತಿರುವ ಮಧ್ಯೆ ಹೊರ್ಮುಜ್ ಜಲಸಂಧಿಯನ್ನು ಮುಕ್ತ ಹಾಗು ಸುರಕ್ಷಿತವಾಗಿರಿಸಿಕೊಳ್ಳಲು ಯುದ್ಧ ನೌಕೆಗಳನ್ನು ರವಾನಿಸುವಂತೆ ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್ ಹಾಗು ಇತರೆ ದೇಶಗಳಿಗೆ ಟ್ರಂಪ್ ಮನವಿ ಮಾಡಿದ್ದಾರೆ.

# ಜಾವಗಲ್ ಗ್ರಾ.ಪಂ. ಸಂತೆ ಸುಂಕ ಹರಾಜು ಪ್ರಕ್ರಿಯೆ



• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಜಾವಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಂತೆ ಹಾಗು ಬೀದಿ ಬದಿ ವ್ಯಾಪಾರಸ್ಥರ ಸುಂಕದ ಬಹಿರಂಗ ಹರಾಜಿನಿಂದ 14.6 ಲಕ್ಷ ರೂ. ಆದಾಯ ಬಂದಿದೆ ಎಂದು ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಕೆ.ಎಂ.ಯಶೋಧಮ್ಮ ಅವರು ತಿಳಿಸಿದರು.

ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಹಿರಂಗ ಹರಾಜು ಪ್ರಕ್ರಿಯೆ ಬಳಿಕ ಮಾತನಾಡಿದ ಅವರು, ನಿಯಮಾವಳಿಯಂತೆ ಹರಾಜು ಪ್ರಕ್ರಿಯೆ ನಡೆದಿದೆ. ನಿಗದಿತ ಮೊತ್ತವನ್ನು ಪಂಚಾಯಿತಿಯ ಬ್ಯಾಂಕ್ ಖಾತೆಗೆ ಪಾವತಿ ಮಾಡಿ ರಶೀದಿ ಪಡೆಯಬೇಕು. ನಿಯಮ ಉಲ್ಲಂಘನೆ ಮಾಡಿದರೆ ಕಟ್ಟಿದ ಠೇವಣಿ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದರು.

ತಾಲ್ಲೂಕಿನಾದ್ಯಂತ ಸುಮಾರು 12+12 ಜನ ಎರಡು ಬಿಡ್‌ನಲ್ಲಿ ಭಾಗವಹಿಸಲು ಠೇವಣಿ ಇರಿಸಿದ್ದರು. ನಿಗದಿತ ಸಮಯಕ್ಕೆ ಸರಿಯಾಗಿ ಬಿಡ್ ಪ್ರಾರಂಭಿಸಲಾಗಿ ಸಂತೆ ಸುಂಕ ಹರಾಜನ್ನು ಜೆ.ಜಿ. ತಿಮ್ಮೇಗೌಡ ಅವರು 7 ಲಕ್ಷ ರೂ.ಗೆ ತಮ್ಮದಾಗಿಸಿಕೊಂಡರು. ಬೀದಿ ಬದಿ ವ್ಯಾಪಾರಿಗಳ ಅಂಗಡಿಗಳ ಸುಂಕವನ್ನು 7.6 ಲಕ್ಷ ರೂ. ಕೂಗಿ ಹೇಮಕುಮಾರ್ ತಮ್ಮದಾಗಿಸಿಕೊಂಡರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿ,ಕಾರ್ಯದರ್ಶಿ ನಂದಿನಿ, ಲೆಕ್ಕ ಸಹಾಯಕಿ ಶೋಭ, ಮಾಜಿ ಸದಸ್ಯರಾದ ಪರಮೇಶ, ದೊರೆ, ಸಂತೋಷ, ಪ್ರಭಾಕರ, ಅಶೋಕ, ಗ್ರಾಮಸ್ಥರಾದ ಜೆ.ಕೆ.ಸಿದ್ದೇಗೌಡ, ಜೆ.ಕೆ.ಚಿಕ್ಕಯ್ಯ, ದೇವರಾಜು, ಹಳೇಬೀಡು ಸಿದ್ದರಾಜು, ಬಾಬು, ಮಂಜು, ಲೋಕೇಶ್ ಮತ್ತಿತರರು ಇದ್ದರು.

# ಸರ್ಫರಾಜ್ ಅಹಮದ್ ಕ್ರಿಕೆಟ್‌ಗೆ ನಿವೃತ್ತಿ

**ಕರಾಚಿ:** ಪಾಕಿಸ್ತಾನ ತಂಡದ ಮಾಜಿ ನಾಯಕ ಸರ್ಫರಾಜ್ ಅಹಮದ್ ಅವರು ಎಲ್ಲಾ ಮಾದರಿಯ ಕ್ರಿಕೆಟ್‌ಗೆ ಭಾನುವಾರ ನಿವೃತ್ತಿ ಘೋಷಿಸಿದರು.

ಮೂರೂ ಮಾದರಿಗಳಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕನಾಗುತ್ತೇನೆಂದು ಕನಸಿನಲ್ಲೂ ಭಾವಿಸಿರಲಿಲ್ಲ. 2006ರಲ್ಲಿ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಗೆದ್ದಿದ್ದು ಹಾಗೂ 2017ರ ಚಾಂಪಿಯನ್ಸ್ ಟ್ರೋಫಿ ಜಯಿಸಿದ್ದು ಮರೆಯಲಾಗದ ಕ್ಷಣ ಎಂದು ಸರ್ಫರಾಜ್ ಹೇಳಿದ್ದಾರೆ.

ಅವರು, ಐಸಿಸಿ ಟೂರ್ನಿಗಳ ಎರಡು ಫೈನಲ್ ಪಂದ್ಯಗಳಲ್ಲಿ ಭಾರತದ ವಿರುದ್ಧ ಪಾಕ್ ತಂಡಕ್ಕೆ ಜಯ ತಂದುಕೊಟ್ಟ ಏಕೈಕ ನಾಯಕ ಎನಿಸಿದ್ದಾರೆ. ವಿಕೆಟ್ ಕೀಪರ್ ಬ್ಯಾಟರ್ ಸರ್ಫರಾಜ್ ಅವರು 54 ಟೆಸ್ಟ್, 177 ಏಕದಿನ ಹಾಗೂ 61 ಟಿ20 ಪಂದ್ಯಗಳನ್ನು ಆಡಿದ್ದಾರೆ. ಕ್ರಮವಾಗಿ 3,031, 2,315 ಹಾಗೂ 818 ರನ್ ಗಳಿಸಿದ್ದಾರೆ. ಮೂರೂ ಮಾದರಿ ಸೇರಿ 100 ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದಾರೆ. ಅವರು 2023ರ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಪರ್ತ್‌ನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಕೊನೆಯ ಬಾರಿಗೆ ಆಡಿದ್ದರು.

# ಬೇಲೂರಿನಲ್ಲಿ ಆರೋಗ್ಯ ಉಚಿತ ತಪಾಸಣೆ ಯಶಸ್ವಿ

• ಪ್ರಜೋದಯ ವರದಿ




**ಬೇಲೂರು:** ಲಯನ್ಸ್ ಕ್ಲಬ್, ಕಾವೇರಿ ಕ್ಲಿನಿಕ್, ಚಿಕ್ಕಮಗಳೂರಿನ ಕೆಆರ್‌ಎಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗು ಹಾಸನದ ಎಂಎಂಎಂ ಆಸ್ಪತ್ರೆ ವತಿಯಿಂದ ಭಾನುವಾರ ಪಟ್ಟಣದ ಕಾವೇರಿ ಕ್ಲಿನಿಕ್ ಆವರಣದಲ್ಲಿ ಆರೋಗ್ಯ ಉಚಿತ ಶಿಬಿರ ಆಯೋಜಿಸಲಾಗಿತ್ತು.

ಕಾವೇರಿ ಕ್ಲಿನಿಕ್ ವೈದ್ಯಾಧಿಕಾರಿ ಡಾ|| ಚಂದ್ರಮೌಳಿ ಅವರು ಮಾತನಾಡಿ, ತಾಲ್ಲೂಕಿನ ಸಾರ್ವಜನಿಕರ ಅನುಕೂಲಕ್ಕಾಗಿ ಲಯನ್ಸ್ ಸಂಸ್ಥೆಯಿಂದ ಕಳೆದ 14 ವರ್ಷಗಳಿಂದ ಸಮಾಜ ಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಆರೋಗ್ಯ ಉಚಿತ ತಪಾಸಣಾ ಶಿಬಿರಗಳನ್ನು ಪಟ್ಟಣ ಹಾಗು ಗ್ರಾಮೀಣ ಪ್ರದೇಶದಲ್ಲಿ ಆಯೋಜಿಸಿ ತಪಾಸಣೆ ನಡೆಸುತ್ತಿದೆ. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಖ್ಯಾತ ವೈದ್ಯರನ್ನು ಬೇಲೂರಿಗೆ ಆಹ್ವಾನಿಸಿ ಸಾರ್ವಜನಿಕರ ಆರೋಗ್ಯ ತಪಾಸಣೆ ನಡೆಸುವ ವ್ಯವಸ್ಥೆ ಮಾಡಲಾಗುತ್ತಿದೆ. ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ಸಂಬಂಧಿತ ಆಸ್ಪತ್ರೆಗಳ ವಿಳಾಸ ಹಾಗು ಮಾಹಿತಿ ನೀಡಲಾಗುವುದು. ಸಾರ್ವಜನಿಕರು ಇಂತಹ ಉಚಿತ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಲಯನ್ಸ್ ಕ್ಲಬ್ ಅಧ್ಯಕ್ಷೆ ತಾರಾಮಣಿ ಸುರೇಶ್ ಅವರು ಮಾತನಾಡಿ, ಈ ಶಿಬಿರದಲ್ಲಿ ಮಧುಮೇಹ (ಶುಗರ್), ರಕ್ತದೊತ್ತಡ, ಹೃದಯ ರೋಗ, ಮಕ್ಕಳ ಆರೋಗ್ಯ ತಪಾಸಣೆ, ಮೂಳೆ ಮತ್ತು ಕೀಲು ಸಮಸ್ಯೆಗಳು, ಸ್ತ್ರೀ ರೋಗ, ನರರೋಗ ಹಾಗು ಕಣ್ಣಿನ ರೋಗಗಳ ತಪಾಸಣೆ ನಡೆಸಲಾಗುತ್ತಿದೆ. ನಮ್ಮ ಸಂಸ್ಥೆಯಿಂದ ಇಂತಹ ಹಲವಾರು ಶಿಬಿರಗಳನ್ನು ವಿವಿಧ ಆಸ್ಪತ್ರೆಗಳ ವೈದ್ಯರ ಸಹಕಾರದೊಂದಿಗೆ ಆಯೋಜಿಸಲಾಗುತ್ತಿದೆಯೆಂದರು.

ಡಾ|| ಗುರುಪ್ರಸಾದ್ ಬಾಣೂರು, ಡಾ|| ಎಂ.ಉಮೇಶ್, ಡಾ||ಎಸ್.ಕೆ.ಅವಿನಾಶ್, ಡಾ||ಜಿ.ಆರ್.ಲೀಲಾ, ಡಾ||ಬಿ.ಕೆ.ಮನೋಜ್‌ಕುಮಾರ್, ಡಾ||ಚಂದ್ರಮೌಳಿ ಅವರು ಆರೋಗ್ಯ ತಪಾಸಣೆ ನಡೆಸಿದರು.

ಲಯನ್ಸ್ ಕಾರ್ಯದರ್ಶಿ ಸಂತೋಷ್, ಖಜಾಂಚಿ ಆದರ್ಶ, ಪದಾಧಿಕಾರಿಗಳಾದ ಸುರೇಶ್, ಅಬ್ದುಲ್ ಲತೀಫ್, ಕೆ.ಎಲ್. ಸುರೇಶ್, ಮಂಜುನಾಥ್, ಹೇಮಂತ್, ಡಾ|| ರೋಹನ್, ಮುಕ್ತಾರ್ ಅಹಮದ್, ಪೂವಯ್ಯ ಇತರರಿದ್ದರು.

# ಸಮಾನತೆ ಮೀರಿ ಮಹಿಳೆ ಸಾಧನೆ: ಕೃಷ್ಣಮೂರ್ತಿ

• ಪ್ರಜೋದಯ ವರದಿ



**ಅರಸೀಕೆರೆ:** ಮಹಿಳೆಯರು ಇಂದು ಶಿಕ್ಷಣ, ವಿಜ್ಞಾನ, ರಕ್ಷಣೆ, ರಾಜಕೀಯ ಮತ್ತು ಕ್ರೀಡೆ ಸೇರಿ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಿಗೆ ಸಮಾನವಾಗಿ ಕೆಲವೊಮ್ಮೆ ಮೀರಿ ಸಾಧನೆ ಮಾಡುತ್ತಿದ್ದಾರೆ ಎಂದು ಪೌರಯುಕ್ತ ಕೃಷ್ಣಮೂರ್ತಿ ಅವರು ಹೇಳಿದರು.

ನಗರಸಭೆಯ ಮಹಿಳಾ ಸಿಬ್ಬಂದಿ ಹಾಗೂ ಮಾಜಿ ಸದಸ್ಯೆಯರ ಸಂಯುಕ್ತಾಶ್ರಯದಲ್ಲಿ ನಗರಸಭಾ ಕಾರ್ಯಾಲಯದಲ್ಲಿ ನಡೆದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ತಮ್ಮ ಪ್ರತಿಭೆ ಮತ್ತು ಆತ್ಮವಿಶ್ವಾಸದಿಂದ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿರುವುದಲ್ಲದೇ ಕುಟುಂಬದ ಜವಾಬ್ದಾರಿಗಳೊಂದಿಗೆ ಸಮಾಜಮುಖಿಯಾಗಿ ತೊಡಗಿಸಿಕೊಂಡು ಮುಂಚೂಣಿಗೆ ಬರುತ್ತಿರುವುದು ಶ್ಲಾಘನೀಯವಾಗಿದೆ. ನಗರ ಹಾಗೂ ಗ್ರಾಮೀಣ ಭಾಗದ ಮಹಿಳೆಯರು ಕಾನೂನು ಅರಿತುಕೊಂಡು ನೆಮ್ಮದಿಯ ಜೀವನ ನಡೆಸಬೇಕೆಂದರು.

ವಕೀಲರಾದ ಗೀತಾ ಅವರು ಮಾತನಾಡಿ, ಪ್ರತಿ ಮಹಿಳೆ ಸಮಾಜದಲ್ಲಿ ಸರಿಸಮಾನವಾಗಿ ಬದುಕು ಕಟ್ಟಿಕೊಳ್ಳಬೇಕು. ಯಾವುದೇ ಕಾರಣಕ್ಕೂ ದೌರ್ಜನ್ಯ, ಒತ್ತಡಕ್ಕೊಳಗಾಗ ಬಾರದು. ಬಾಲ್ಯ ವಿವಾಹ, ಒತ್ತಡದ ಮದುವೆ ವರದಕ್ಷಿಣೆ ಪಿಡುಗಿನಿಂದ ಎಚ್ಚರವಾಗಿರಬೇಕು. ಕಾನೂನು ಎಲ್ಲರಿಗೂ ಸರಿ ಸಮನಾಗಿದೆ. ಮಹಿಳೆ ಪರ ಕಾಯ್ದೆಗಳು ತಿಳಿಯಬೇಕೆಂದು ಹೇಳಿದರು.

ನಗರಸಭಾ ಮಾಜಿ ಸದಸ್ಯೆ ಅನ್ನಪೂರ್ಣ ಮಾತನಾಡಿ, ಹೆಣ್ಣು ಮಕ್ಕಳು ಶಿಕ್ಷಣದ ಜ್ಞಾನದ ಬೆಳಕಿನ ಶಕ್ತಿಯ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬಂದು ಸಾಧನೆ ಮಾಡ ಬೇಕು. ತಮ್ಮ ಜೀವನದಲ್ಲಿ ಎದುರಾಗುವ ಸಮಸ್ಯೆಗಳು ಹಾಗೂ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ ಗುರಿ ಮುಟ್ಟಲು ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಗುರುತಿಸಿ ಸನ್ಮಾನಿಸಲಾಯಿತು. ಸಹಾಯಕ ಕಾರ್ಯಪಾಲಕ ರವಿಕುಮಾರ್, ನಗರಸಭೆ ಮಾಜಿ ಸದಸ್ಯರಾದ ಪ್ರೇಮಮಲ್ಲಿಕಾರ್ಜುನ, ಶ್ವೇತಾ ರಮೇಶ್, ಗುಲ್ವಾರ್ ಬಾನು, ವ್ಯವಸ್ಥಾಪಕಿ ಕಲಾವತಿ, ಲೆಕ್ಕಾಧಿಕ್ಷಕಿ ಲತಾಮಣಿ, ಕಂದಾಯ ನಿರೀಕ್ಷಕ ಮಂಜುನಾಥ್, ನಗರಸಭೆ ಅಧಿಕಾರಿಗಳಾದ ಅನಿತಾ, ಸರೋಜಮ್ಮ, ಸುಮ, ಆರೋಗ್ಯ ನಿರೀಕ್ಷಕ ಲಿಂಗರಾಜು ಉಪಸ್ಥಿತರಿದ್ದರು.

# ಅನುದಾನಿತ ಶಾಲಾ ಶಿಕ್ಷಕರಿಗೆ ಸೌಲಭ್ಯ ಕಲ್ಪಿಸಲು ಒತ್ತಾಯ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರಿಗೆ ನೀಡುವ ಸವಲತ್ತು ಅನುದಾನಿತ ಶಾಲಾ ಶಿಕ್ಷಕರಿಗೂ ಲಭ್ಯವಾಗಬೇಕೆಂದು ರಾಜ್ಯ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವರಾಜೇಗೌಡ ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ 63 ಸಾವಿರ ಸದಸ್ಯರನ್ನು ನಮ್ಮ ಸಂಘ ಹೊಂದಿದೆ. ಸರ್ಕಾರವು ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ 25 ಸಾವಿರ ರೂ. ಹಬ್ಬದ ಮುಂಗಡ ಸೌಲಭ್ಯ ನೀಡುತ್ತಿದೆ. ಆದರೆ, ಅನುದಾನಿತ ಪ್ರೌಢ ಶಾಲಾ ಶಿಕ್ಷಕರಿಗೆ ಕೇವಲ 10 ಸಾವಿರ ರೂ. ಕೊಡುತ್ತದೆ. ಕಳೆದ 2 ವರ್ಷಗಳಿಂದ ಈ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗುತ್ತಿದೆ. ಹಬ್ಬದ ಮುಂಗಡವನ್ನು ಹೆಚ್ಚಿಸಬೇಕೆಂದರು.

ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿ ಮಾಡಬೇಕು. ವಿಷಯವಾರು ಶಿಕ್ಷಕರ ನೇಮಕಾತಿಯಾಗಬೇಕು. ಎಸ್‌ಎಸ್‌ಎಲ್‌ಸಿ ಫಲಿತಾಂಶ ನಿರ್ಣಯ ಮಾನದಂಡವನ್ನು ಶೇ.33 ಅಂಕಗಳಿಂದ ಶೇ.35ಕ್ಕೆ ಹೆಚ್ಚಿಸಬೇಕು. ಹೀಗೆ ಮಾಡಿದರೆ ಮಾತ್ರ ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಸಾಧ್ಯವಾಗುತ್ತದೆಂದರು.

ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಮಹತ್ವದ ಘಟ್ಟ. ಅಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾದರೆ ಐಟಿಐ ಇಲ್ಲವೇ ಇತರೆ ಕೋರ್ಸ್ ಕಲಿತು ಬದುಕು ರೂಪಿಸಿಕೊಳ್ಳಬಹುದು. ಆ ಹಂತವನ್ನೇ ಸರ್ಕಾರ ಹಗುರವಾಗಿ ಪರಿಗಣಿಸುವುದು ಸರಿಯಲ್ಲವೆಂದರು. ಆದ್ದರಿಂದ ಸರ್ಕಾರವು ಒಂದಷ್ಟು ಬದಲಾವಣೆಯೊಂದಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ವ್ಯವಸ್ಥೆಗೆ ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

**ಪ್ರಧಾನ ಕಾರ್ಯದರ್ಶಿ ಅವಿರೋಧ ಆಯ್ಕೆ**

ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಚನ್ನರಾಯಪಟ್ಟಣದ ಪೇಟೆ ಸರ್ಕಾರಿ ಪ್ರೌಢಶಾಲೆಯ ಕನ್ನಡ ಭಾಷಾ ಶಿಕ್ಷಕ ದೇವರಾಜೇಗೌಡ ಅವಿರೋಧ ಆಯ್ಕೆಯಾಗಿದ್ದಾರೆ. ಬೆಂಗಳೂರಿನ ಶಿಕ್ಷಕರ ಸದನದಲ್ಲಿ ರಾಜ್ಯಾಧ್ಯಕ್ಷ ಬಿ.ಸಿದ್ದಬಸಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು. ಜೊತೆಗೆ ಸಹ ಕಾರ್ಯದರ್ಶಿಯಾಗಿ ಟಿ.ಕೆ.ಪ್ರಕಾಶ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಡಿ.ಎನ್.ರವಿ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಎಲ್.ಆರ್.ಸತೀಶ್, ಹೆಚ್.ಎನ್.ಕೇಶವಮೂರ್ತಿ, ಗುರುರಾಜ್, ಉಮೇಶ್, ರಂಗಸ್ವಾಮಿ, ಪುರುಷೋತ್ತಮ್ ಹಾಗು ಇತರರು ಇದ್ದರು.

# ಮುದ್ದನಹಳ್ಳಿ ವೀರಾಂಜನೇಯಸ್ವಾಮಿ ದೇಗುಲ ಲೋಕಾರ್ಪಣೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ದೊಡ್ಡಮಗ್ಗೆ ಹೋಬಳಿ ಮುದ್ದನಹಳ್ಳಿ ಗ್ರಾಮದಲ್ಲಿ ಶ್ರೀ ವೀರಾಂಜನೇಯಸ್ವಾಮಿ ದೇವಾಲಯ ಭಾನುವಾರ ಲೋಕಾರ್ಪಣೆಗೊಂಡಿತು.

ದೇವಸ್ಥಾನದಲ್ಲಿ ಶ್ರೀ ಆಂಜನೇಯಸ್ವಾಮಿ ಮೂರ್ತಿಗೆ ವಿಶೇಷವಾಗಿ ಅಲಂಕರಿಸಲಾಗಿತ್ತು. ಹೋಮ, ಹವನ ಹಾಗು ವಿಶೇಷ ಪೂಜಾ ವಿಧಾನಗಳು ವಿಧಿವತ್ತಾಗಿ ನಡೆದವು. ಭಕ್ತರು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ, ಕೆಸವತ್ತೂರು ಮಠದ ಶ್ರೀ ಬಸವರಾಜೇಂದ್ರ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಎಂ.ಟಿ.ಕೃಷ್ಣೇಗೌಡ ಮತ್ತಿತರರಿದ್ದರು.



# ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ: ಬೆಂಬಲಿಸಲು ಮನವಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಮುಂಬರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಜಿಲ್ಲೆಯ ಸಾಹಿತಿಗಳು, ಸಾಹಿತ್ಯಾಭಿಮಾನಿ ಹಾಗು ಕನ್ನಡದ ಮನಸ್ಸುಗಳು ತಮಗೆ ಬೆಂಬಲಿಸಬೇಕೆಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ಅಧ್ಯಕ್ಷಹೆಚ್.ಎನ್.ಲೋಕೇಶ್ ಅವರು ಮನವಿ ಮಾಡಿದರು.

ಪಟ್ಟಣದ ಗಣಪತಿ ಪೆಂಡಾಲ್‌ನಲ್ಲಿ ಆಯೋಜಿಸಿದ್ದ ಹಿತೈಷಿಗಳ ಸಭೆಯಲ್ಲಿ ಅವರು ಮಾತನಾಡಿ, ನಾನು ಶಿಕ್ಷಕನಾಗಿ ನಂತರ ಶಿಕ್ಷಕರ ಸಂಘದ ಅಧ್ಯಕ್ಷನಾಗಿ, ತಾಲ್ಲೂಕು ನೌಕರರ ಸಂಘದ ಅಧ್ಯಕ್ಷನಾಗಿ ಶಿಕ್ಷಕರ ಹಾಗು ತಾಲ್ಲೂಕು ನೌಕರರ ಹಿತ ಕಾಪಾಡುವ ಕೆಲಸ ಮಾಡಿದ್ದೇನೆ. ಎರಡು ಬಾರಿ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷನಾಗಿ ಕನ್ನಡ ಕಟ್ಟುವ ಹಾಗು ಕನ್ನಡದ ಸೇವೆಯನ್ನು ಎಲ್ಲರೂ ಮೆಚ್ಚುವಂತೆ ನಿರ್ವಹಿಸಿದ್ದೇನೆಂದರು.

ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಮುಂಬರುವ ದಿನಗಳಲ್ಲಿ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವ ಆಕಾಂಕ್ಷಿಗಳು ಈಗಾಗಲೇ ತಮ್ಮ ಸ್ಪರ್ಧೆಯನ್ನು ಪ್ರಕಟಿಸುತ್ತಿರುವ ಹಿನ್ನಲೆಯಲ್ಲಿ ತಾಲ್ಲೂಕಿನ ಮತದಾರರ ಅಭಿಪ್ರಾಯದಂತೆ ತಾನು ಸ್ಪರ್ಧೆಯಲ್ಲಿ ಇದ್ದೇನೆಂದರು.

ಈ ವರೆಗೆ ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ. ಜಿಲ್ಲಾ ಕೇಂದ್ರ ಮೊದಲುಗೊಂಡು ಎಲ್ಲಾ ತಾಲ್ಲೂಕುಗಳಿಂದಲೂ ಬೆಂಬಲ ವ್ಯಕ್ತವಾಗಿದೆ. ಈ ಪವಿತ್ರ ಕ್ಷೇತ್ರದಲ್ಲಿ ಅಪಚಾರವಾಗದಂತೆ ಎಚ್ಚರಿಕೆ ವಹಿಸುತ್ತೇನೆ. ದೊರೆತ ಅವಕಾಶದಿಂದ ವಂಚಿತರಾಗದಂತೆ ಬೆಂಬಲಿಗರು ಪ್ರೋತ್ಸಾಹಿಸಿರುವುದು ಹೆಚ್ಚಿನ ಶಕ್ತಿ ದೊರೆತಂತಾಗಿದೆಯೆಂದರು.

ಮುಂದಿನ ದಿನಗಳಲ್ಲಿ ಜಿಲ್ಲೆ ಹಾಗು ಎಲ್ಲಾ ತಾಲ್ಲೂಕುಗಳಲ್ಲಿ ಕನ್ನಡಾಂಬೆಯ ಸೇವೆಯನ್ನು ಜಿಲ್ಲೆಯ ಹಿರಿಯ ಸಾಹಿತಿ ಹಾಗು ಕನ್ನಡ ಮನಸ್ಸುಗಳ ಸಲಹೆ ಸಹಕಾರದಿಂದ ನಡೆಸಿಕೊಂಡು ಹೋಗುತ್ತೇನೆಂದರು.

ಲೇಖಕ ಹಡನಹಳ್ಳಿ ಲೋಕೇಶ್ ಮಾತನಾಡಿದರು. ಜಾನಪದ ವಿದ್ವಾಂಸ ಡಾ.ಚಂದ್ರುಕಾಳೇನಹಳ್ಳಿ, ನಿವೃತ್ತ ಪ್ರಾಂಶುಪಾಲ ಎನ್.ತಮ್ಮಣ್ಣಗೌಡ, ಪರಿಸರ ಪ್ರೇಮಿ ಸಿ.ಎನ್.ಅಶೋಕ್, ಪುರಸಭೆ ಮಾಜಿ ಅಧ್ಯಕ್ಷ ಸಿ.ಎನ್. ಶಶಿಧರ್, ಸಿ.ಟಿ. ಅಶೋಕ್, ರೈತ ಸಂಘದ ರಾಜ್ಯಾಧ್ಯಕ್ಷ ಅರಳಾಪುರ ಮಂಜೇಗೌಡ, ಕಲಾವಿದ ಮಿಲ್ಟ್ರಿ ಮಂಜುನಾಥ್, ನಿವೃತ್ತ ಉಪನ್ಯಾಸಕ ಎನ್. ನಾರಾಯಣ್, ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಮಧು ಕರಡೇವು, ಸಾಹಿತಿ ನಂಬಿಹಳ್ಳಿ ಚಂದ್ರು, ಸಾಹಿತಿ ಜಯಂತಿ, ಅನಿಲ್ ಮರುಗೂರು, ಅಣತಿ ಆನಂದ್, ಯಶೋಧಾ ಜೈನ್, ಮಹದೇವ್ ಇತರರಿದ್ದರು.

# ಯುಗಾದಿ-ರಂಜಾನ್‌ಗೆ 2 ಸಾವಿರ ವಿಶೇಷ ಬಸ್

**ಬೆಂಗಳೂರು:** ಯುಗಾದಿ ಮತ್ತು ರಂಜಾನ್ ಹಬ್ಬಗಳಿಗಾಗಿ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಲಿರುವುದರಿಂದ ಕೆಎಸ್‌ಆರ್‌ಟಿಸಿ 2000 ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ. ಮಾರ್ಚ್ 18ರಿಂದ 20ರವರೆಗೆ ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ ಹಾಗೂ ಮಾ.22 ರಂದು ವಿವಿಧೆಡೆಯಿಂದ ಬೆಂಗಳೂರಿಗೆ ಬಸ್ ವ್ಯವಸ್ಥೆ ಮಾಡಲಾಗಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣಗಳಿಂದ ಬಸ್‌ಗಳು ಸಂಚರಿಸಲಿವೆ. ನಿಗಮದ ಕಾರ್ಯಾಚರಣೆ ವ್ಯಾಪ್ತಿಯ ಎಲ್ಲಾ ತಾಲ್ಲೂಕು, ಜಿಲ್ಲಾ ಬಸ್ ನಿಲ್ದಾಣಗಳಿಂದ ಸಂಚಾರ ಒತ್ತಡಕ್ಕೆ ಅನುಗುಣವಾಗಿ ವಿಶೇಷ ಸಾರಿಗೆಗಳ ಕಾರ್ಯಾಚರಣೆ ಮಾಡಲಾಗುವುದು. + ra+ – ri – t- ವೆಬ್‌ಸೈಟ್ ಭೇಟಿ ನೀಡಿ ಇ-ಟಿಕೆಟ್ ಬುಕಿಂಗ್ ಅನ್ನು ಮಾಡಬಹುದಾಗಿದೆ. ಪ್ರಯಾಣಿಕರು ಕರ್ನಾಟಕ ಹಾಗೂ ಅಂತಾರಾಜ್ಯದಲ್ಲಿ ಇರುವ ಗಣಕೀಕೃತ ಬುಕಿಂಗ್ ಕೌಂಟರ್‌ಗಳ ಮೂಲಕ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸ ಬಹುದು. 4 ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ.5ರಷ್ಟು ರಿಯಾಯಿತಿ ನೀಡಲಾಗುವುದು ಹಾಗೂ ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್‌ನ್ನು ಒಟ್ಟಿಗೆ ಕಾಯ್ದಿರಿಸಿದಾಗ ಬರುವ ದರದಲ್ಲಿ ಶೇ.10 ರಿಯಾಯಿತಿ ನೀಡಲಾಗುವುದು.

ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗಾ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ಹೊರರಾಜ್ಯಗಳ ತಿರುಪತಿ, ವಿಜಯವಾಡ, ಹೈದರಾಬಾದ್ ಸಹಿತ ವಿವಿಧೆಡೆ ವಿಶೇಷ ಬಸ್‌ಗಳು ಸಂಚರಿಸಲಿವೆ.

# ಅಸ್ಸಾಂನಲ್ಲಿ ಬಿಜೆಪಿಗೆ ಬಹುಮತ: ಅಮಿತ್ ಶಾ

• ಪ್ರಜೋದಯ ವರದಿ

**ಗುವಾಹಟಿ:** ಅಸ್ಸಾಂನಲ್ಲಿ ಬಿಜೆಪಿ ಹಿಂದೆಂದೂ ಕಾಣದ ಬಹುಮತದೊಂದಿಗೆ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಕೇಂದ್ರ ಗೃಹ ಸಚಿವ ಸಚಿವ ಅಮಿತ್ ಶಾ ಅವರು ಭಾನುವಾರ ಹೇಳಿದ್ದಾರೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿಎಂ ಹಿಮಂತ ಬಿಸ್ವಾ ಶರ್ಮಾ ನೇತೃತ್ವದಲ್ಲಿ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದಿದ್ದಾರೆ. ಕಾಂಗ್ರೆಸ್, ತನ್ನ ಆಡಳಿತ ಅವಧಿಯಲ್ಲಿ ನುಸುಳುಕೋರರಿಗೆ ಆಶ್ರಯ ನೀಡಿತು. ಆದರೆ ಬಿಜೆಪಿ ಸರ್ಕಾರವು ಅವರನ್ನು ದೇಶದಿಂದ ಓಡಿಸುವ ಸಂಕಲ್ಪ ಮಾಡಿದೆ ಎಂದು ಶಾ ತಿಳಿಸಿದ್ದಾರೆ.

ಒಳನುಸುಳುವಿಕೆಯನ್ನು ಕಾಂಗ್ರೆಸ್ ಕಾನೂನುಬದ್ಧಗೊಳಿಸಿತು. ಆದರೆ ಬಿಜೆಪಿ ಅವರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವುದು ಮಾತ್ರವಲ್ಲದೆ, ಅವರನ್ನು ದೇಶದಿಂದ ಹೊರ ಹಾಕಲಾಗುತ್ತದೆ. ಚುನಾವಣಾ ಆಯೋಗವು ಕೆಲವು ರಾಜ್ಯಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಅನ್ನು ನಡೆಸಿತು. ಆದರೆ ಕಾಂಗ್ರೆಸ್ ಈ ಪ್ರಕ್ರಿಯೆಯನ್ನು ವಿರೋಧಿಸಿತು ಎಂದು ಶಾ ಕಿಡಿಕಾರಿದ್ದಾರೆ.

ಕಾಂಗ್ರೆಸ್ ಆಳ್ವಿಕೆಯಲ್ಲಿ ಅಸ್ಸಾಂ ಹಿಂಸಾಚಾರಕ್ಕೆ ಹೆಸರುವಾಸಿಯಾಗಿತ್ತು. ಈ ಹಿಂಸಾಚಾರದಲ್ಲಿ ಅನೇಕ ಯುವಕರು ಹತ್ಯೆಯಾದರು. ಕಾಂಗ್ರೆಸ್ ಯುವಜನರಿಗೆ ಏನನ್ನೂ ಮಾಡಲಿಲ್ಲ. ಕಾಂಗ್ರೆಸ್ ನಾಯಕರು ತಮ್ಮ ಕುಟುಂಬದ ಬಗ್ಗೆ ಮಾತ್ರ ಕಾಳಜಿ ವಹಿಸುತ್ತಿದ್ದರು ಎಂದು ಶಾ ಹೇಳಿದ್ದಾರೆ.

# ಉಕ್ರೇನ್‌ನ 28 ಡ್ರೋನ್‌ಗಳನ್ನುಹೊಡೆದುರುಳಿಸಿದ್ದೇವೆ: ರಷ್ಯಾ

• ಪ್ರಜೋದಯ ವರದಿ



**ಮಾಸ್ಕೊ:** ಅಮೇರಿಕ, ಇಸ್ರೇಲ್ ಮತ್ತು ಇರಾನ್ ಯುದ್ಧದ ನಡುವೆ ಹಲವು ವರ್ಷಗಳಿಂದ ನಡೆಯುತ್ತಿರುವ ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧವೂ ತೀವ್ರತೆ ಪಡೆಯುತ್ತಿದೆ. ರಾಜಧಾನಿ ಮಾಸ್ಕೊ ಮೇಲೆ 28 ಡ್ರೋನ್‌ಗಳನ್ನು ಬಳಸಿ ದಾಳಿಗೆ ಉಕ್ರೇನ್ ಯತ್ನಿಸಿದ್ದು, ಅವುಗಳನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾ ಹೇಳಿದೆ.


ಭಾನುವಾರ ಮಧ್ಯಾಹ್ನ ಮಾಸ್ಕೊ ಕಡೆಗೆ ನುಗ್ಗಿ ಬರುತ್ತಿದ್ದ ಡ್ರೋನ್‌ಗಳನ್ನು ನಮ್ಮ ವಾಯು ರಕ್ಷಣಾ ವ್ಯವಸ್ಥೆಯು ಹೊಡೆದುರುಳಿಸಿದೆ ಎಂದು ಮಾಸ್ಕೊ ಮೇಯರ್ ಸೆರ್ಗೆಯ್ ಸೊಬ್ಯಾನಿನ್ ಹೇಳಿದ್ದಾರೆ. ಶನಿವಾರವೂ ಉಕ್ರೇನ್‌ನ ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ರಷ್ಯಾ ಹೇಳಿತ್ತು.

ಡ್ರೋನ್ ದಾಳಿಯ ಆತಂಕದ ಕಾರಣ, ರಾಜಧಾನಿಯ ನೈರುತ್ಯ ಮತ್ತು ವಾಯವ್ಯದಲ್ಲಿರುವ ವ್ನುಕೊವೊ ಮತ್ತು ಶೆರೆಮೆಟಿಯೆವೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿವೆ ಎಂದು ನಾಗರಿಕ ವಿಮಾನಯಾನ ಸಂಸ್ಥೆ ರೊಸಾವಿಯಾಟ್ಸಿಯಾ ಘೋಷಿಸಿದೆ.

ಶನಿವಾರ ಸಹ, ರಾಜಧಾನಿಯಲ್ಲಿರುವ ನಾಲ್ಕು ಸ್ಥಳೀಯ ವಿಮಾನ ನಿಲ್ದಾಣಗಳ(ವ್ನುಕೊವೊ, ಡೊಮೊಡೆಡೋವೊ ಮತ್ತು ಝುಕೊವ್‌ಸ್ಕಿ) ಪೈಕಿ ಮೂರು ಹಲವು ಗಂಟೆಗಳ ಕಾಲ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ್ದವು. ಮಾಸ್ಕೊ ಕಡೆಗೆ ಬರುತ್ತಿದ್ದ 47 ಡ್ರೋನ್‌ಗಳನ್ನು ನಾಶಪಡಿಸಿದ್ದೇವೆಂದು ಶನಿವಾರ ರಷ್ಯಾದ ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿತ್ತು.

ಶನಿವಾರ, ಮಾಸ್ಕೊ ಸಮಯ ಬೆಳಿಗ್ಗೆ 11ರಿಂದ ರಾತ್ರಿ 9ರ ನಡುವೆ ಸಕ್ರಿಯವಾಗಿದ್ದ ವಾಯು ರಕ್ಷಣಾ ವ್ಯವಸ್ಥೆಗಳು ಬ್ರಿಯಾನ್ಸ್ಕ್, ಕಲುಗಾ, ಬೆಲ್ಗೊರೊಡ್, ಟ್ವೆರ್, ಸ್ಮೋಲೆನ್ಸ್ಕ್ ಮತ್ತು ಕುರ್ಸ್ಕ್ ಪ್ರದೇಶಗಳು, ಕ್ರಾಸ್ನೋಡರ್ ಪ್ರಾಂತ್ಯ ಮತ್ತು ಮಾಸ್ಕೊ ಮೇಲೆ ಹಾರುತ್ತಿದ್ದ ಉಕ್ರೇನ್‌ನ ಒಟ್ಟು 280 ಮಾನವರಹಿತ ವೈಮಾನಿಕ ವಾಹನಗಳನ್ನು ನಾಶಪಡಿಸಿದವು ಎಂದು ಸಚಿವಾಲಯ ತಿಳಿಸಿದೆ.

## ಮಾತುಕತೆ ಉಕ್ರೇನ್ ಕಾಯುತ್ತಿದೆ: ಝೆಲೆನ್‌ಸ್ಕಿ



ಕೀವ್: ಅಮೇರಿಕದ ಮಧ್ಯಸ್ಥಿಕೆಯಲ್ಲಿ ಮುಂದಿನ ಹಂತದ ಮಾತುಕತೆಗೆ ಉಕ್ರೇನ್ ಸಿದ್ಧವಿದೆ ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ತಿಳಿಸಿದ್ದಾರೆ.

ಅಮೇರಿಕ, ಉಕ್ರೇನ್ ಹಾಗೂ ರಷ್ಯಾದ ಸಂಧಾನ ತಂಡಗಳ ನಡುವೆ ಮುಂದಿನ ಹಂತದ ಸಭೆ ನಡೆಸಲು ಅಮೇರಿಕವು ಪ್ರಸ್ತಾವ ಮುಂದಿಟ್ಟಿದೆ. ಸಭೆಯಲ್ಲಿ ಅಮೇರಿಕದ ರಾಯಭಾರಿಗಳಾದ ಸ್ಟೀವ್ ವಿಟ್‌ಕಾಫ್ ಮತ್ತು ಜೇರೆಡ್ ಕುಶ್ನರ್ ಭಾಗವಹಿಸಲು ಒಪ್ಪಿಗೆ ಸೂಚಿಸಿದ್ದು, ರಷ್ಯಾವು ತನ್ನ ನಿಯೋಗವನ್ನು ಕಳುಹಿಸಲು ನಿರಾಕರಿಸಿದೆ.

ನಾವು ಅಮೇರಿಕದ ಪ್ರತಿಕ್ರಿಯೆಗಾಗಿ ಎದುರು ನೋಡುತ್ತಿದ್ದೇವೆ. ರಷ್ಯಾದ ನಿಯೋಗವು ಅಮೇರಿಕಕ್ಕೆ ಬರುವುದನ್ನು ಖಚಿತಪಡಿಸಬೇಕೆಂದು ಝೆಲೆನ್‌ಸ್ಕಿ ಅವರು ಮಾಧ್ಯಮ ಪ್ರತಿ ನಿಧಿಗಳಿಗೆ ತಿಳಿಸಿದ್ದಾರೆ.

ನಾವು ಯಾವುದೇ ರೀತಿಯ ಮಾತುಕತೆಯ ಪ್ರಸ್ತಾವವನ್ನು ತಡೆಯುತ್ತಿಲ್ಲ, ಆದರೆ ಮೂರು ರಾಷ್ಟ್ರಗಳ ಸಭೆಯೇ ನಡೆಯಬೇಕೆಂದು ಈ ವೇಳೆ ಆಗ್ರಹಿಸಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭಗೊಂಡ ಬಳಿಕ ಅಮೇರಿಕ ಮಧ್ಯಸ್ಥಿಕೆಯಲ್ಲಿ ಉಕ್ರೇನ್ ಹಾಗೂ ರಷ್ಯಾ ನಡುವೆ ನಡೆಯಬೇಕಿದ್ದ ಸಭೆಯೂ ಮುಂದೂಡಿಕೆಯಾಗಿದೆ.

## ಕಾನ್ಶಿರಾಂಗೆ ಭಾರತ ರತ್ನ ನೀಡುವಂತೆ ಪ್ರಧಾನಿಗೆ ಪತ್ರ

• ಪ್ರಜೋದಯ ವರದಿ

**ನವದೆಹಲಿ:** ಭಾರತದ ರಾಜಕೀಯ ಸ್ವರೂಪವನ್ನೇ ಬದಲಿಸಿದ ದೇಶದ ಬಹುಜನರು ಮತ್ತು ಬಡವರಲ್ಲಿ ರಾಜಕೀಯ ಜಾಗೃತಿ ಮೂಡಿಸಿದ ದಲಿತರ ಐಕಾನ್ ಕಾನ್ಶಿರಾಂ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನವನ್ನು ನೀಡುವಂತೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಒತ್ತಾಯಿಸಿದ್ದಾರೆ.

ಕಾನ್ಶಿರಾಂ ಅವರು ತಮ್ಮ ಚಳವಳಿಗಳ ಮೂಲಕ ಬಹುಜನರು ಮತ್ತು ಬಡವರಲ್ಲಿ ರಾಜಕೀಯ ಜಾಗೃತಿ ಮೂಡಿಸಿದ್ದಾರೆ. ಸಂವಿಧಾನದಲ್ಲಿ ನೀಡಿರುವ ಭರವಸೆಯಂತೆ ಸಮಾನತೆ, ಘನತೆ ಮತ್ತು ಭಾಗವ 'ಹಿಸುವಿಕೆಯನ್ನು ಸಮಾಜದ ಅತ್ಯಂತ ಕೆಳ ಸ್ತರದಲ್ಲಿರುವರಿಗೆ ತಲುಪಿಸುವುದಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಅವುಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದ್ದರೆಂದು ರಾಹುಲ್ ಪತ್ರದಲ್ಲಿ ವಿವರಿಸಿದ್ದಾರೆ.

## ಗಡಿಯಲ್ಲಿ ನುಸುಳುತ್ತಿದ್ದ ಉಗ್ರನನ್ನು ಹೊಡೆದುರುಳಿಸಿದ ಸೇನೆ

ಶ್ರೀನಗರ : ಜಮ್ಮು -ಕಾಶೀರದ ಉರಿ ಸೆಕ್ಟರ್‌ನ ನಿಯಂತ್ರಣ ರೇಖೆ ಬಳಿ ಪಾಕಿಸ್ತಾನದಿಂದ ನಡೆದ ನುಸುಳುವಿಕೆ ಯತ್ನವನ್ನು ಭಾರತೀಯ ಸೇನೆ ಇಂದು ವಿಫಲಗೊಳಿಸಿದ್ದು, ಒಬ್ಬ ಪಾಕಿಸ್ತಾನಿ ಉಗ್ರನನ್ನು ಹೊಡೆದುರುಳಿಸಿದೆ ಎಂದು ಸೇನೆ ತಿಳಿಸಿದೆ.


ಜಮ್ಮು-ಕಾಶೀರ ಪೊಲೀಸರಿಂದ ಬಂದ ಖಚಿತ ಗುಪ್ತಚರ ಮಾಹಿತಿಯ ಆಧಾರದಲ್ಲಿ ಮಾರ್ಚ್ 14 ಮತ್ತು 15ರ ಮಧ್ಯರಾತ್ರಿ ಉರಿ ಸೆಕ್ಟರ್‌ನ ಬುಚ್ಚರ್ ಪ್ರದೇಶದಲ್ಲಿ ಸೇನೆ ಮತ್ತು ಭದ್ರತಾ ಪಡೆಗಳು ಸಂಯುಕ್ತ ಕಾರ್ಯಾಚರಣೆ ನಡೆಸಿದವು ಎಂದು ಶ್ರೀನಗರದಲ್ಲಿರುವ ಚಿನಾರ್ ಕಾರ್ಪ್ಸ್ ತನ್ನ ಸಾಮಾಜಿಕ ಜಾಲತಾಣ ಖಾತೆಯಲ್ಲಿ ತಿಳಿಸಿದೆ.

ಕಾರ್ಯಾಚರಣೆ ವೇಳೆ ದಟ್ಟ ಕಾಡಿನ ಪ್ರದೇಶದಲ್ಲಿ ಅನುಮಾನಾಸ್ಪದ ಚಲನವಲನ ಕಂಡುಬಂದಿದ್ದು, ಅಡಗುತಾಣದಲ್ಲಿ ತಂಗಿದ್ದ ಉಗ್ರನನ್ನು ಸೈನಿಕರು ಪತ್ತೆ ಹಚ್ಚಿದ್ದರು. ಈ ವೇಳೆ ಉಗ್ರ ಅಡ್ಡಾದಿಡ್ಡಿ ಗುಂಡಿನ ದಾಳಿ ನಡೆಸಿದ್ದಾನೆ.ಸೇನಾ ಪಡೆಗಳು ಪ್ರತಿದಾಳಿ ನಡೆಸಿದ ಪರಿಣಾಮ ಪಾಕಿಸ್ತಾನದ ಒಬ್ಬ ಉಗ್ರನನ್ನು ಹೊಡೆದುರುಳಿಸಲಾಗಿದೆ ಎಂದು ತಿಳಿಸಲಾಗಿದೆ.

# ದ್ವಿತೀಯ ಪಿಯು ಪಾಸಾಗಲು ಎರಡೇ ಅವಕಾಶ

• ಪ್ರಜೋದಯ ವರದಿ

**ಬೆಂಗಳೂರು:** ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣರಾದ ಅಥವಾ ಫಲಿತಾಂಶ ಸುಧಾರಣೆ ಬಯಸುವ ಅಭ್ಯರ್ಥಿಗಳಿಗೆ ಇನ್ನು ಮುಂದೆ ಎರಡು ವರ್ಷ ಮಾತ್ರ ಪರೀಕ್ಷೆ ಬರೆಯಲು ಅವಕಾಶ ಸಿಗಲಿದೆ.



ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡ ವರ್ಷ ಮತ್ತು ನಂತರದ ವರ್ಷದಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಮಾತ್ರ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ಅವಕಾಶವಿರುತ್ತದೆ. ಅಲ್ಲದೆ, ಒಂದು ನಿರ್ದಿಷ್ಟ ವರ್ಷದಲ್ಲಿ ನಡೆಯುವ ಮೂರು ವಾರ್ಷಿಕ ಪರೀಕ್ಷೆಗಳನ್ನು ಬರೆಯುವ ಅಭ್ಯರ್ಥಿಗಳು, ಅಂಕಗಳನ್ನು ಹೆಚ್ಚಿಸಿಕೊಳ್ಳಲು ಅಥವಾ ಫಲಿತಾಂಶ ಸುಧಾರಣೆಗೆ ಬಯಸಿದರೆ ಕಡ್ಡಾಯವಾಗಿ ಮುಂದಿನ ವರ್ಷವೂ ನಡೆಯುವ ಮೂರು ವಾರ್ಷಿಕ ಪರೀಕ್ಷೆಗಳಲ್ಲಿಯೇ ಅದನ್ನೂ ಪೂರ್ಣಗೊಳಿಸಬೇಕಿದೆ. ಎರಡು ವರ್ಷಗಳ ಕಾಲಾವಧಿ ಮೀರಿದ ಬಳಿಕ ಹೆಚ್ಚುವರಿ ಅವಕಾಶ ಇರುವುದಿಲ್ಲವೆಂದು ಶಿಕ್ಷಣ ಇಲಾಖೆ ಸ್ಪಷ್ಟನೆ ನೀಡಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ಬರುವ ಈ ನಿಯಮವು ಖಾಯಂ, ಖಾಸಗಿ ಹಾಗು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಅನ್ವಯವಾಗಲಿದೆ. 2024-25ನೇ ಸಾಲಿನಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯು ವಿದ್ಯಾರ್ಥಿಗಳಿಗಾಗಿ ಮೂರು ವಾರ್ಷಿಕ ಪರೀಕ್ಷೆ ಬರೆಯುವ ವ್ಯವಸ್ಥೆ ಜಾರಿಗೆ ತರಲಾಗಿತ್ತು. ಹೊಸ ನಿಯಮದ ಅನ್ವಯ 2024ರ ದ್ವಿತೀಯ ಪಿಯು ಪರೀಕ್ಷೆ 1, 2 ಮತ್ತು 3ಕ್ಕೆ ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ಮುಂದಿನ ವರ್ಷ ಗಳಿಗೂ ಫಲಿತಾಂಶ ಸುಧಾರಣೆಗೆ ಅವಕಾಶ ನೀಡಲಾಗಿತ್ತು. ಆದರೆ, ವಿದ್ಯಾರ್ಥಿಗಳು ತಮ್ಮ ಫಲಿತಾಂಶ ಸುಧಾರಿಸಿಕೊಳ್ಳಲು ಎಷ್ಟು ಬಾರಿ ಪರೀಕ್ಷೆ ಬರೆಯಬಹುದು ಮತ್ತು ಕಾಲಮಿತಿ ಎಷ್ಟು ಎಂಬ ಬಗ್ಗೆ ನಿಯಮಗಳು ಇರಲಿಲ್ಲ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪ್ರತಿ ವರ್ಷ ಪರೀಕ್ಷೆಗೆ ನೋಂದಣಿ ಪ್ರಕ್ರಿಯೆ ನಡೆಸುವಾಗ, ಹಿಂದಿನ ವರ್ಷಗಳಲ್ಲಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳ ಹಾಗು ಎಲ್ಲಾ ವಿಷಯಗಳ ವರದಿಯನ್ನು ಕಾಲೇಜು ಲಾಗಿನ್‌ನಲ್ಲಿ ಕಡ್ಡಾಯವಾಗಿ ನಮೂದಿಸಬೇಕಾ ಗುತ್ತಿತ್ತು. ಅತಿ ಹೆಚ್ಚು ಅಭ್ಯರ್ಥಿಗಳ ಮಾಹಿತಿಗಳನ್ನು ನಿರ್ವಹಣೆ ಮಾಡುವ ವೇಳೆ ತಾಂತ್ರಿಕ ಸಮಸ್ಯೆ ಗಳು ಎದುರಾಗುತ್ತಿದ್ದವು. ಉತ್ತೀರ್ಣ ರಾದ ಅಥವಾ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸುವ ಕೆಲಸ ಕೂಡ ಹೆಚ್ಚಿತ್ತು. ಅನುತ್ತೀರ್ಣರಾದವರು ಫಲಿತಾಂಶ ಸುಧಾರಣೆ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಮತ್ತೆ ಹೊಸ ಅಂಕಪಟ್ಟಿ ಮುದ್ರಿಸಿ ಹಳೆ ಅಂಕ ಪಟ್ಟಿಯನ್ನು ವಾಪಾಸ್ ಪಡೆಯಬೇಕಿತ್ತು. ಈ ಎಲ್ಲಾ ಕಾರಣಗಳಿಂದ ಕೇವಲ ಎರಡು ವರ್ಷಗಳ ಮಿತಿ ಹೇರುವಂತೆ ಮಂಡಳಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.

## ಮೂರು ಇಲಾಖೆಗಳ ಹಗ್ಗ ಜಗ್ಗಾಟ

» ಮೊದಲನೇ ಪುಟದಿಂದ

ಈ ಪ್ರಕಾರ ನಾರಾಯಣಗುರು ಸೇವಾ ಸಂಘದ ಸದಸ್ಯರು 1985ರಲ್ಲಿ ಕಂದಾಯ ಇಲಾಖೆಯಲ್ಲಿ ಸಂಘಕ್ಕೆ ಭೂಮಿ ಮಂಜೂರಾತಿ ವಿಷಯದ ಪ್ರಸ್ತಾಪದ ನಿರ್ಣಯ, 2000ರಲ್ಲಿ 10 ಗುಂಟೆ ಜಮೀನು ಮಂಜೂರಾತಿ ಪಡೆದಿರುವುದು. 2005ರಲ್ಲಿ ಪಹಣಿ ದಾಖಲಾಗಿರುವ ದಾಖಲತೆಗಳನ್ನು ಹಾಜುರು ಪಡಿಸಿದರು. ಆದರೆ, ರೈಲ್ವೆ ಇಲಾಖೆ ದಾಖಲಾತಿಗಳು ಮೈಸೂರು ವಿಭಾಗದ ಕಚೇರಿಯಲ್ಲಿರುವುದರಿಂದ ತುರ್ತು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲ ಎಂದಿದ್ದರು. ಈ ವೇಳೆ ಪೊಲೀಸ್ ಅಧಿಕಾರಿಯು, ರೈಲ್ವೆ ಇಲಾಖೆಯ ಅಧಿಕಾರಿಗಳು ಮೂರು ದಿನಗಳ ಗಡುವು ನೀಡಿ ದಾಖಲಾತಿ ಹಾಜರುಪಡಿಸಬೇಕು. ತಪ್ಪಿದಲ್ಲಿ ಸಂಘದವರ ತಂಟೆಗೆ ಹೋಗಬಾರದು ಎಂಬ ಎಚ್ಚರಿಕೆ ನೀಡಿದ್ದರು.

ಆದರೆ, ಮೂರು ದಿನಗಳು ಕಳೆದರೂ ರೈಲ್ವೆ ಅಧಿಕಾರಿಗಳು ದಾಖಲೆ ಹಾಜರು ಪಡಿಸಲು ವಿಫಲವಾದ ಹಿನ್ನಲೆಯಲ್ಲಿ ಸೇವಾ ಸಂಘದ ಪದಾಧಿಕಾರಿಗಳು ಮತ್ತೆ ತಂತಿ ಬೇಲಿ ನಿರ್ಮಿಸಿದ್ದಾರೆ. ಆದರೆ, ಪುರಸಭೆ ಅಧಿಕಾರಿಗಳ ವಾದವೇ ಬೇರೆ ಇದ್ದು ಮೂಲ ದಾಖಲಾತಿಗಳನ್ನು ಸರಿಯಾಗಿ ಪರಿಶೀಲಿಸದೆ ಪುರಸಭೆಗೆ ಸೇರಿದ ಭೂಮಿಯನ್ನು ನಾರಾಯಣ ಗುರು ಸೇವಾ ಸಂಘಕ್ಕೆ ಕಂದಾಯ ಇಲಾಖೆ ಮಂಜೂರು ಮಾಡಿದೆ. 1933ರಲ್ಲಿ ಅಂದಿನ ಮೈಸೂರು ರಾಜರು ಲಕ್ಷ್ಮಿಪುರಂ ಬಡಾವಣೆಯಲ್ಲಿನ ಸರ್ವೆ ನಂಬರ್ 184, 186 ಹಾಗು 191ರಲ್ಲಿ ಒಟ್ಟು ಆರು ಎಕರೆ ಜಾಗವನ್ನು ನಿವೇಶನ ಹಾಗು ಉದ್ಯಾನವನಕ್ಕಾಗಿ ಮೀಸಲಿಟ್ಟಿದ್ದು, ಅದರಲ್ಲಿ ಐದು ಎಕರೆ ಭೂಮಿಯನ್ನು ಆಗಲೇ ಪುರಸಭೆಗೆ ಹಸ್ತಾಂತರಗೊಂಡಿದೆ. ಉದ್ಯಾನವನಕ್ಕಾಗಿ ಮೀಸಲಿಟ್ಟಿದ್ದ ಸರ್ವೆ ನಂಬರ್ 191ರ ಒಂದು ಎಕರೆ ಭೂಮಿ ಕಂದಾಯ ಇಲಾಖೆಯಿಂದ ಪುರಸಭೆಗೆ ಹಸ್ತಾಂತರವಾಗಿದೆ. ಇಲ್ಲಿ ಉದ್ಯಾನವನವಿದ್ದ ಕುರುಹುಗಳು ಇಂದಿಗೂ ಇದ್ದು ಕೆಲಸವನ್ನು ನೆಲಸಮಗೊಳಿಸಲಾಗಿದೆ ಎಂಬ ವಾದ ಮುಂದಿಟ್ಟಿದೆ. ಸದ್ಯ ಪುರಸಭೆ ಅಧಿಕಾರಿಗಳು ಸರ್ವೆ ನಂಬರ್ 191ರ ದಾಖಲೆಗಳ ಹುಡುಕಾಟ ನಡೆಸುತ್ತಿದ್ದಾರೆ. ಆದರೆ, ತಲಾತಲಾಂತರದಿದ ಈ ಭೂಮಿ ಕಂದಾಯ ಇಲಾಖೆಗೆ ಸೇರಿದ್ದು ಎಂಬುದಕ್ಕೆ ದಾಖಲೆಗಳಿದ್ದು ಇಂದಿಗೂ ಪಹಣಿಯಲ್ಲಿ ಗೋಮಾಳ ಎಂದೇ ನೋಂದಣಿಯಾಗಿದೆ.

ಪುರಸಭೆಗೆ ಅನಾದಿ ಕಾಲದಲ್ಲಿ ಭೂಮಿ ಹಸ್ತಾಂತರವಾಗಿದ್ದರೆ ಇಂದಿನವರೆಗೆ ಏಕೆ ಸುಮ್ಮನಿದ್ದರು. ಪುರಸಭೆ ಅಧಿಕಾರಿಗಳ ವಾದದಲ್ಲಿ ತರ್ಕವಿಲ್ಲ ಎಂಬುದು ಕಂದಾಯ ಇಲಾಖೆಯ ವಾದವಾಗಿದೆ. ಆದರಿಂದಾಗಿ ಈ ಭೂಮಿ ನಿಜವಾದ ಮಾಲೀಕರು ಯಾರೆಂಬ ಪ್ರಶ್ನೆಗೆ ಉತ್ತರವೇ ಇಲ್ಲದಾಗಿದೆ.

# ಅಧಿವೇಶನದ ಬಳಿಕ ಸಿದ್ದರಾಮಯ್ಯ ದೆಹಲಿಗೆ

## ಸಂಪುಟ ಸರ್ಜರಿ ಚರ್ಚೆ ಸಾಧ್ಯತೆ

• ಪ್ರಜೋದಯ ವರದಿ

**ಬೆಂಗಳೂರು** : ವಿಧಾನ ಮಂಡಲದ ಅಧಿವೇಶನದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಭೇಟಿ ನೀಡಲಿದ್ದು, ಸಚಿವ ಸಂಪುಟ ಪುನರ್ ರಚನೆ ಕುರಿತು ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸುವ ಸಾಧ್ಯತೆ ಇದೆ.



ಸಾಂಪ್ರದಾಯಿಕವಾಗಿ ಬಜೆಟ್ ಮಂಡನೆ ಅಥವಾ ಅದರ ಅಂಗೀಕಾರದ ಬಳಿಕ ಹಣಕಾಸು ಸಚಿವರು, ದೆಹಲಿಗೆ ಭೇಟಿ ನೀಡಿ ಹೈಕಮಾಂಡ್‌ನ ನಾಯಕರಿಗೆ ಬಜೆಟ್‌ನಲ್ಲಿರುವ ಅಂಶಗಳ ಕುರಿತು ಮಾಹಿತಿ ನೀಡಿ ಬರುವುದು ವಾಡಿಕೆ. ಆದರೆ ಪ್ರಸ್ತುತ ಸಿದ್ದರಾಮಯ್ಯ ಅವರಿಗೆ ಸಮಯಾವಕಾಶದ ಅಭಾವದಿಂದಾಗಿ ದೆಹಲಿಗೆ ಭೇಟಿ ನೀಡಲು ಸಾಧ್ಯವಾಗಿಲ್ಲ.

ಈ ಹಿನ್ನಲೆಯಲ್ಲಿ ಅಧಿವೇಶನದ ಬಳಿಕ ಸಿದ್ದರಾಮಯ್ಯ ದೆಹಲಿಗೆ ತೆರಳಲಿದ್ದಾರೆಂದು ಮೂಲಗಳು ತಿಳಿಸಿವೆ. ಸುಮಾರು 12ಕ್ಕೂ ಹೆಚ್ಚು ಮಂದಿ ಸಚಿವರನ್ನು ಸಂಪುಟದಿಂದ ಕೈಬಿಟ್ಟು, ಸಂಪುಟ ಪುನರ್ ರಚಿಸುವ ಇರಾದೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಂದಿದ್ದಾರೆ. ಆದರೆ, ಇದಕ್ಕೆ ಡಿ.ಕೆ. ಶಿವಕುಮಾರ್ ಅಡ್ಡಗಾಲಾಗಿದ್ದು ನಾಯಕತ್ವ ವಿಷಯ ಇತ್ಯರ್ಥಗೊಳ್ಳದವರೆಗೂ ಸಂಪುಟ ಪುನರ್ ರಚನೆಯಾಗುವುದು ಬೇಡವೆಂದು ಪಟ್ಟು ಹಿಡಿದಿದ್ದಾರೆ.

ಇದಕ್ಕೆ ಪ್ರತಿತಂತ್ರವಾಗಿ ಸಿದ್ದರಾಮಯ್ಯ ಬಣ, ಹಿರಿಯ ಶಾಸಕರನ್ನು ಬಳಸಿಕೊಳ್ಳಲಾರಂಭಿಸಿದೆ. ಕಾಂಗ್ರೆಸ್‌ನಲ್ಲಿಯೇ ಹಿರಿಯ ಶಾಸಕರ ಒಂದು ಬಣ ಸಭೆ ನಡೆಸಿ, ಸಂಪುಟ ಪುನರ್‌ರಚನೆ ಮಾಡುವಂತೆ ಒತ್ತಡ ಹೇರಿದೆ. ತಮಗೂ ಸಂಪುಟದಲ್ಲಿ ಅವಕಾಶ ನೀಡಬೇಕು. ಮೂರಕ್ಕಿಂತಲೂ ಹೆಚ್ಚು ಬಾರಿ ಗೆದ್ದಿರುವ ಶಾಸಕರನ್ನು ಕಡೆಗಣಿಸಿರುವುದು ಸರಿಯಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪದೇ ಪದೇ ನಾಯಕತ್ವದ ಬದಲಾವಣೆಯ ಗೊಂದಲದಿಂದ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಸಿದ್ದರಾಮಯ್ಯ ಸಂಪುಟ ಪುನರ್‌ರಚನೆಗೆ ಕೈ ಹಾಕಿದ್ದಾರೆ. ಒಮೆ ಸಂಪುಟ ಪುನರ್ ರಚನೆಯಾದರೆ, ಮುಂದಿನ ಅವಧಿಗೆ ನಾಯಕತ್ವದ ಗೊಂದಲಗಳು ಚರ್ಚೆಯಾಗುವುದಿಲ್ಲ. ಈ ಕಾರಣಕ್ಕೆ ಹಿರಿಯ ಶಾಸಕರನ್ನು ಬಿಟ್ಟು ಸಿದ್ದರಾಮಯ್ಯ ಹೈಕಮಾಂಡ್ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆಸಿದ್ದಾರೆ.

ಬಜೆಟ್ ಅಧಿವೇಶನದ ಬಳಿಕ ಹಿರಿಯ ಶಾಸಕರು ದೆಹಲಿಗೆ ತೆರಳಿ, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲಿದ್ದಾರೆ. ಅದೇ ಸಮಯದಲ್ಲಿ ಸಿದ್ದರಾಮಯ್ಯ ಕೂಡ ದೆಹಲಿಗೆ ತೆರಳುವ ಸಾಧ್ಯತೆ ಇದೆ. ಈವರೆಗೂ ಹಾಲು-ಜೇನಿನಂತಿರುವ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ರಾಜಕೀಯ ಬಾಂಧವ್ಯ ಬಜೆಟ್ ಅಧಿವೇಶನದ ನಂತರ ಸ್ವರೂಪ ಬದಲಿಸುವ ಸಾಧ್ಯತೆ ಇದೆ. ಅದಕ್ಕೆ ಹಿರಿಯ ಶಾಸಕರು ಕೂಡ ಧ್ವನಿಗೂಡಿಸಲಿದ್ದಾರೆ.

ಇತ್ತ ಡಿ.ಕೆ.ಶಿವಕುಮಾರ್ ಅವರ ಪರವಾಗಿ ಕಿರಿಯ ಶಾಸಕರು ಬ್ಯಾಟಿಂಗ್ ಮಾಡುತ್ತಿದ್ದು, ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ನೀಡಬೇಕೆಂದು ಒತ್ತಡ ಹೇರುವ ಪ್ರಯತ್ನ ಮಾಡುತ್ತಿದ್ದಾರೆ. ತೆರೆಮರೆಯಲ್ಲಿ ಕುರ್ಚಿ ಪೈಪೋಟಿ ಭಾರಿ ಮುಸುಕಿನ ಗುದ್ದಾಟಕ್ಕೆ ಕಾರಣವಾಗಿದೆ. ಸಿದ್ದರಾಮಯ್ಯ ಅವರು ಬಜೆಟ್‌ನ ಮಾಹಿತಿ ನೀಡುವ ನೆಪದಲ್ಲಿ ದೆಹಲಿಗೆ ತೆರಳುತ್ತಿರುವುದು ಮತ್ತಷ್ಟು ಕುತೂಹಲ ಕೆರಳಿಸಿದೆ.

ಡಿ.ಕೆ.ಶಿವಕುಮಾರ್ ಅಸ್ಸಾಂ ಚುನಾವಣೆಯ ಉಸ್ತುವಾರಿಯಾಗಿರುವುದರಿಂದ ಪದೇ ಪದೇ ದೆಹಲಿಗೆ ತೆರಳುತ್ತಿದ್ದು, ಹೈ ಕಮಾಂಡ್ ನಾಯಕರನ್ನು ಭೇಟಿ ಮಾಡುತ್ತಿದ್ದಾರೆ. ಆದರೆ ಅದು ಪ್ರಯೋಜನಕ್ಕೆ ಬರುತ್ತಿಲ್ಲ. ಕೊನೆಗೆ ಸಿದ್ದರಾಮಯ್ಯ ಅವರೇ ಅಖಾಡಕ್ಕಿಳಿಯುವ ಸಾಧ್ಯತೆಯಿರುವುದರಿಂದ ರಾಜಕೀಯ ಯಾವ ರೀತಿ ಬದಲಾಗಲಿದೆ ಎಂದು ಕಾದುನೋಡಬೇಕಿದೆ.

## ಪಾಲಿಕೆ ಕಿರಿಯ ಆರೋಗ್ಯ ನಿರೀಕ್ಷಕ ಆದೀಶ್ ಕುಮಾರ್ ಅಮಾನತು



• ಪ್ರಜೋದಯ ವರದಿ

**ಹಾಸನ:** ಕರ್ತವ್ಯ ಲೋಪ ಆರೋಪದಡಿ ಮಹಾನಗರ ಪಾಲಿಕೆ ಕಿರಿಯ ಆರೋಗ್ಯ ನಿರೀಕ್ಷಕ ಆದಿಶ್ ಕುಮಾರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಬರೆದಿದ್ದ ಪತ್ರದ ಹಿನ್ನಲೆಯಲ್ಲಿ ರಾಜ್ಯ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಆದೀಶ್ ಕುಮಾರ್ ಸರ್ಕಾರಿ ವಾಹನ ಚಲಾಯಿಸಿ ಪಾನಮತ್ತರಾಗಿ ಸಾರ್ವಜನಿಕ ಪ್ರದೇಶದಲ್ಲಿ ರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ದ್ದವು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಕ ಸ್ಥಾನದ ಆದೀಶ್ ಕುಮಾರ್ ಪಾಲಿಕೆಯಲ್ಲಿ ಕೆಲಸ ಮಾಡಿ ಕೊಂಡಿದ್ದರು. ಅವರ ದುರ್ನಡತೆ ಸಾಬೀತಾದ ಹಿನ್ನಲೆಯಲ್ಲಿ ಪಾಲಿಕೆ ಆಯುಕ್ತರು ಸೇವೆಯಿಂದ ಬಿಡುಗಡೆ ಮಾಡಿದ್ದರು. ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಆದೀಶ್ ಕುಮಾರ್ ಅವರ ಕರ್ತವ್ಯ ನಿರ್ಲಕ್ಷ್ಯದ ಬಗ್ಗೆ ಕೂಡಲೇ ಶಿಸ್ತುಕ್ರಮ ಜರುಗಿಸಬೇಕೆಂದು ಜಿಲ್ಲಾಧಿಕಾರಿ ಅವರು ಪ್ರಸ್ತಾವನೆ ಸಲ್ಲಿಸಿದ್ದರು. ಅದರ ಅನ್ವಯ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪಿ.ಆರ್.ರವೀಂದ್ರ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

## ಇಂಜಿನೀಯರ್‌ಗಳು ಕೃಷಿ ಕ್ಷೇತ್ರದತ್ತ ಆಸಕ್ತಿ ತೋರಲಿ

» ಮೊದಲನೇ ಪುಟದಿಂದ


ಏಂಜೆಲ್ಸ್ ಕಾಲೇಜಿನ ಕನ್ನಡ ಉಪನ್ಯಾಸಕ ಎನ್.ಬಿ.ಕುಮಾರಸ್ವಾಮಿ ಅವರು ಮಾತನಾಡಿ, ಇದು ನೈಜತೆಯನ್ನು ಒಳಗೊಂಡಿರುವ ಕಾದಂಬರಿ. ಕೃಷಿಯ ಮಹತ್ವ ದಿನೇ ದಿನೇ ಹೆಚ್ಚುತ್ತಿರುವ ಸಂದರ್ಭದಲ್ಲಿ ಕಾದಂಬರಿಯ ಪಾತ್ರಗಳು ನಮ್ಮನ್ನು ಬೇರೆ ಲೋಕಕ್ಕೆ ಕರೆದೊಯ್ಯುತ್ತವೆ. ಚಿಕ್ಕಚಿಕ್ಕ ಕಾರಣಗಳಿಗೆ ಕುಟುಂಬಗಳು ಒಡೆಯುತ್ತಿರುವ ಕಾಲದಲ್ಲಿ ಈ ಕಾದಂಬರಿ ಬದುಕಿನ ಒಲವಿನ ಮಹತ್ವವನ್ನು ತಿಳಿಸುತ್ತದೆ. ಲೇಖಕಿ ಮಮತಾ ಪ್ರಭು ಅವರು ಕೃಷಿ ಹಾಗು ಪ್ರೇಮ ಎರಡನ್ನೂ ಹದವಾಗಿ ಬೆರೆಸಿದ್ದಾರೆ. ಯುವ ರೈತರತ್ತ ಯುವತಿಯರ ಒಲವನ್ನು ಸೆಳೆಯುವ ಅವರ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸಿದರು.

ಲೇಖಕಿ ಮಮತಾ ಪ್ರಭು ಅವರು ಮಾತನಾಡಿ, ಇದು ಕೇವಲ ಸಾಹಿತ್ಯವಲ್ಲ, ಒಂದು ಅಭಿಯಾನ, ಯುವ ರೈತರನ್ನು ವಿವಾಹವಾಗಲು ನಿರಾಕರಿಸುತ್ತಿರುವ ಯುವತಿಯರಿಗೆ ಈ ಕಾದಂಬರಿ ಸೌಮ್ಯ ಆಗ್ರಹವಾಗಿದೆ. ಒಲವಿಗೆ ವೃತ್ತಿ ಅಥವಾ ಉದ್ಯೋಗದ ಬಣ್ಣ ಹಚ್ಚಬಾರದು. ರೈತ ಎಂಬ ಕಾರಣಕ್ಕೆ ಅವರ ಪ್ರೀತಿಯನ್ನು ನಿರಾಕರಿಸಬಾರದು. ರೈತ ಸಂತಾನವಿಲ್ಲದಿದ್ದರೆ ನಾವು ಆಹಾರಕ್ಕಾಗಿ ಕಾಡುಮೇಡು ಅಲೆದಾಡುವ ಪರಿಸ್ಥಿತಿ ಬರುತ್ತದೆ. ರೈತನು ಸಮಾಜದ, ಪೀಳಿಗೆಯ ಹಾಗೂ ಮಣ್ಣಿನ ಆರೋಗ್ಯ ಕಾಪಾಡುವ ವೈದ್ಯನೆಂದರು.

ಮಿ ರೈಸ್ ಫೌಂಡೇಶನ್ ಸಿಇಒ ಡಾ. ಗೀತಾ ಕಿರಣ್, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ, ಪ್ರೊ. ಮೋಹನ, ಲಕ್ಷ್ಮಿ ಇತರರಿದ್ದರು.

## ಗಂಗಾ ಅತಿಕ್ರಮಣ: ಸಮಗ್ರ ವರದಿಗೆ ಸುಪ್ರೀಂ ಸೂಚನೆ

• ಪ್ರಜೋದಯ ವರದಿ



**ನವದೆಹಲಿ:** ಗಂಗಾ ನದಿಯ ತಟ ಹಾಗೂ ಪ್ರವಾಹದ ಬಯಲು ಪ್ರದೇಶದಲ್ಲಿನ ಅಕ್ರಮ ನಿರ್ಮಾಣದ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಮತ್ತು ಅತಿಕ್ರಮಣವನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠವು ಗಂಗಾ ನದಿಯ ಪುನಶ್ಚೇತನ, ರಕ್ಷಣೆ ಮತ್ತು ನಿರ್ವಹಣೆ ಕುರಿತ ಅಧಿಸೂಚನೆಯ ಅನುಷ್ಠಾನಕ್ಕೆ ಇದುವರೆಗೂ ತೆಗೆದುಕೊಂಡ ಕ್ರಮಗಳನ್ನು ದಾಖಲಿಸುವಂತೆಯೂ ಕೇಳಿದೆ.

ಅಧಿಸೂಚನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸ್ವಚ್ಛ ಗಂಗಾ ರಾಷ್ಟ್ರೀಯ ಮಿಷನ್ ಪ್ರಾಧಿಕಾರಕ್ಕೆ ಎದುರಾಗಿರುವ ಅಡೆತಡೆಗಳು ಯಾವುವು? ನದಿ ಹರಿವಿನ ರಾಜ್ಯಗಳಲ್ಲಿ ನದಿ ಬಯಲು ಮತ್ತು ದಡವು ಅತಿಕ್ರಮಣಗಳಿಂದ ಮುಕ್ತವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಾಧಿಕಾರವು ಯಾವ ಯಾವ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದೆಂದು ನ್ಯಾಯಪೀಠವು ಪ್ರಶ್ನಿಸಿದೆ. ಗಂಗಾ ಜಲಾನಯನ ಪ್ರದೇಶದ ರಾಜ್ಯಗಳಿಗೂ ನೋಟಿಸ್ ಜಾರಿ ಮಾಡಿದ್ದು, ಈ ವಿಷಯಕ್ಕೆ ಸಂಬಂಧಿಸಿದ ಪ್ರತ್ಯೇಕ ಪ್ರಕರಣಗಳನ್ನು ಮೀರಿ ವಿಶಾಲ ದೃಷ್ಟಿಕೋನದಿಂದ ಪರಿಶೀಲಿಸಬೇಕಾದ ಅಗತ್ಯವಿದೆ ಎಂದಿದೆ.

ನದಿ ತಟವು ವ್ಯಾಪಕ ಪ್ರಮಾಣದಲ್ಲಿ ಅತಿಕ್ರಮಣಕ್ಕೆ ಒಳಗಾಗಿದೆ ಎಂದ ಅರ್ಜಿದಾರರ ಪರ ವಕೀಲರಾದ ಆಕಾಶ್ ವಸಿಷ್ಠ ಅವರು, ಶುದ್ಧ ನೀರಿರುವ ಕಡೆ ಡಾಲ್ಫಿನ್‌ಗಳೂ ವಾಸ ಇವೆ ಎಂದು ನ್ಯಾಯಪೀಠದ ಗಮನಸೆಳೆದರು.

ನದಿಯ ಬಯಲು ಮತ್ತು ತಟವನ್ನು ಅತಿಕ್ರಮಣದಿಂದ ಮುಕ್ತಗೊಳಿಸುವ ಅಧಿಸೂಚನೆಗೆ ಪೂರಕವಾಗಿ, ಈ ನ್ಯಾಯಾಲಯದಿಂದ ಯಾವ ರೀತಿಯ ಪರಿಣಾಮಕಾರಿ ನಿರ್ದೇಶನಗಳನ್ನು ಪಡೆಯಲು ಪ್ರಾಧಿಕಾರವು ಬಯಸುತ್ತದೆ ಎಂಬುದನ್ನು ತಿಳಿಸುವಂತೆಯೂ ಕೋರಿದೆ. ಪಟ್ನಾ ನಿವಾಸಿ ಅಶೋಕ್ ಕುಮಾರ್ ಸಿನ್ಹಾ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. ಏ.23ಕ್ಕೆ ವಿಚಾರಣೆಯನ್ನು ಮುಂದೂಡಿದೆ.

## ಪ.ಬಂಗಾಳ ಚುನಾವಣೆ: ನೀತಿ ಸಂಹಿತೆಗೂ ಮುನ್ನ ಮಮತಾ ಭರಪೂರ ಘೋಷಣೆ



• ಪ್ರಜೋದಯ ವರದಿ

**ಕೋಲ್ಕತ್ತಾ:** ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸುದೀರ್ಘ ಅವಧಿಯಿಂದ ಬಾಕಿ ಉಳಿದಿದ್ದ ರಾಜ್ಯ ಸರ್ಕಾರಿ ನೌಕರರ ತುಟ್ಟಿ ಭತ್ಯೆ (ಡಿಎ) ಬಾಕಿಯನ್ನು ಪಾವತಿ ಮಾಡುವುದಾಗಿ ಘೋಷಿಸಿದ್ದಾರೆ.

ಚುನಾವಣಾ ಆಯೋಗವು ವಿಧಾನ ಸಭಾ ಚುನಾವಣೆಯ ದಿನಾಂಕವನ್ನು ಪ್ರಕಟಿಸುವ 55 ನಿಮಿಷಕ್ಕೂ ಮುನ್ನ ಅವರು ಈ ಘೋಷಣೆ ಮಾಡಿದ್ದಾರೆ. ಆಯೋಗದ ಪತ್ರಿಕಾಗೋಷ್ಠಿಗೂ ಮುನ್ನ ಮಮತಾ ಬ್ಯಾನರ್ಜಿ ಅವರು ಎಕ್ಸ್‌ನಲ್ಲಿ ಭತ್ಯೆ ಪರಿಷ್ಕರಣೆ ನಿಯಮ 2009ರ ಪ್ರಕಾರ ಬಾಕಿ ಇರುವ ಡಿಎ ಹಣವನ್ನು ಮಾರ್ಚ್ ತಿಂಗಳಿನಿಂದಲೇ ನೌಕರರ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿದ್ದಾರೆ.

ಮತ್ತೊಂದು ಎಕ್ಸ್ ಪೋಸ್ಟ್‌ನಲ್ಲಿ ಅವರು, ಅರ್ಚಕರು ಹಾಗೂ ಮುಝಿನ್‌ಗಳ ಗೌರವ ಧನವನ್ನು 500 ಹೆಚ್ಚಳ ಮಾಡುವುದಾಗಿ ಘೋಷಿಸಿದ್ದಾರೆ. ಪರಿಷ್ಕರಣೆ ಬಳಿಕ ಅವರು ತಿಂಗಳಿಗೆ 2,000 ಗೌರವಧನ ಪಡೆಯಲಿದ್ದಾರೆ. ಅರ್ಚಕರು ಹಾಗೂ ಮುಝಿನ್‌ಗಳು ವಿಳಂಬವಾಗಿ ಸಲ್ಲಿಸಿದ ಅರ್ಜಿಗಳನ್ನೂ ಸರ್ಕಾರ ಅನುಮೋದಿಸಿದೆಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರಿ ನೌಕರರಂತೆಯೇ ತುಟ್ಟಿ ಭತ್ಯೆ ನೀಡಬೇಕು ಎಂದು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಿ ನೌಕರರು ಒತ್ತಾಯಿಸಿದ್ದರು. ಅದಕ್ಕೆ ಸಂಬಂಧಿಸಿದಂತೆ ಕೋಲ್ಕತ್ತಾ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿ, ನ್ಯಾಯಾಲಯವು ನೌಕರರ ಒಕ್ಕೂಟದ ಪರವಾಗಿ ತೀರ್ಪು ಪ್ರಕಟಿಸಿತ್ತು. ಅದನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಆರ್‌ಒಪಿಎ ಸೂತ್ರದ ಪ್ರಕಾರ ರಾಜ್ಯ ಸರ್ಕಾರಿ ನೌಕರರ 2008ರಿಂದ 2019ರವರೆಗಿನ ತುಟ್ಟಿ ಭತ್ಯೆಯನ್ನು ಮರುನಿಗದಿ ಮಾಡುವಂತೆ ಸುಪ್ರೀಂ ಕೋರ್ಟ್ ಕಳೆದ ತಿಂಗಳು ಆದೇಶಿಸಿತ್ತು.

ವಿಧಾನಸಭಾ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಸರ್ಕಾರದ ಈ ನಿರ್ಧಾರವನ್ನು ಕ್ಲಾಸಿಕ್ ಟಿಎಂಸಿ ಡ್ರಾಮಾ ಎಂದು ಟೀಕಿಸಿದ್ದಾರೆ.

## 538 ಹಳ್ಳಿಗಳ ಅಭಿವೃದ್ಧಿಗೆ ಮೂಲಸೌಕರ್ಯ



• ಪ್ರಜೋದಯ ವರದಿ

**ಅರಸೀಕೆರೆ:** ಗ್ರಾಮೀಣ ಪ್ರದೇಶ ಅಭಿವೃದ್ಧಿಯಾದರೆ ಮಾತ್ರ ಕ್ಷೇತ್ರ ಅಭಿವೃದ್ಧಿಯಾದಂತೆ ಎಂದು ಮನಗಂಡು ತಾಲ್ಲೂಕಿನ 538 ಹಳ್ಳಿಗಳ ಅಭಿವೃದ್ಧಿಗೆ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ತಾಲ್ಲೂಕಿನ ಹಿರಿಯೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರಿಹರಪುರ ಬಿ ತಾಂಡ್ಯದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಮೂಲ ಸೌಕರ್ಯಗಳು ಅಭಿವೃದ್ಧಿಯ ಸಂಕೇತವಾಗಿರುವುದರಿಂದ ಸರ್ಕಾರದಿಂದ ಕೋಟ್ಯಾಂತರ ರೂಪಾಯಿ ಅನುದಾನದ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ರಸ್ತೆಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದರೆ ಸ್ಥಳೀಯ ಜನರಿಗೆ ಹಾಗೂ ವಾಹನ ಸವಾರರಿಗೆ ಹಲವು ರೀತಿಯಲ್ಲಿ ಅನೂಕೂಲವಾಗುತ್ತದೆ. ಕ್ಷೇತ್ರದ ಪ್ರತಿ ಗ್ರಾಮಗಳಲ್ಲಿ ಮೂಲ ಸೌಲಭ್ಯಗಳನ್ನು ಪಟ್ಟಿಮಾಡಿಕೊಂಡು ಆದ್ಯತೆ ಮೇರೆಗೆ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರವು ಎಲ್ಲಾ ವರ್ಗಗಳ ಶ್ರೇಯೋಭಿವೃದ್ಧಿಗೆ ಕೊಡುಗೆ ನೀಡಿದೆ ಹಾಗೂ ಗ್ಯಾರಂಟಿ ಯೋಜನೆಗಳಿಗೂ ಹಣ ಒದಗಿಸಲಾಗಿದೆ. ಅದರಿಂದ ಜನರ ಜೀವನ ಮಟ್ಟ ಸುಧಾರಿಸುವಲ್ಲಿ ಸರ್ಕಾರ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿ ಯೋಜನೆಗಳಿಗೆ ವಿಶೇಷ ಅನು ದಾನಗಳನ್ನು ತಂದು ಜನರಿಗೆ ಅನುಕೂಲ ಕಲ್ಪಿಸಲಾಗುವುದೆಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿಳಿ ಚೌಡಯ್ಯ ಅವರು ಮಾತನಾಡಿ, ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿ ಸಾಮಾಜಿಕ ಕಾರ್ಯಗಳು ಮತ್ತು ಜನಪರ ಕೆಲಸಗಳ ಮೂಲಕ ರಾಜ್ಯದಲ್ಲಿ ಮಾದರಿ ಶಾಸಕರಾಗಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ಮಂಜುಳಾಬಾಯಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಾಮು, ಕಾನೀಹಳ್ಳಿ ರಾಮಲಿಂಗಪ್ಪ, ಗ್ರಾಮ ಪಂಚಾಯಿತಿ ಸದಸ್ಯರಾದ ದಿಲೀಪ್, ಪರಮೇಶ್, ಮಂಜುನಾಥ್ ಮುಖಂಡರಾದ ನಂದೀಶ್, ರಘು, ಗುತ್ತಿಗೆದಾರರಾದ ಪ್ರಭು ದೇವ, ಲೋಕೋಪಯೋಗಿ ಇಲಾಖೆ ಎಇಇ ಬಾಲಾಜಿ, ಎ.ಇ.ಅಶ್ವಿನಿ, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

## ವಿಂಡೀಸ್ ಆಟಗಾರರು ತವರಿಗೆ ವಾಪಸ್

**ನವದೆಹಲಿ:** ಭಾರತದಲ್ಲಿ ಈಚೆಗೆ ನಡೆದ ಟಿ-20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ವೆಸ್ಟ್ ಇಂಡೀಸ್ ತಂಡದ ಆಟಗಾರರು ತಮ್ಮ ತವರಿಗೆ ಸುರಕ್ಷಿತವಾಗಿ ತಲುಪಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಅಂತರ ರಾಷ್ಟ್ರೀಯ ವಿಮಾನಯಾನ ವ್ಯವಸ್ಥೆ ಅಸ್ತವ್ಯಸ್ಥವಾಗಿದೆ. ಆದ್ದರಿಂದ ಟೂರ್ನಿ ಮುಗಿದ ನಂತರ ತಮ್ಮ ದೇಶಕ್ಕೆ ತೆರಳಲು ವಿಂಡೀಸ್ ಆಟಗಾರರಿಗೆ ಕೂಡಲೇ ಅನುಕೂಲವಾಗಿರಲಿಲ್ಲ. ಆದ್ದರಿಂದ ಅವರು ಮೂರು ದಿನಗಳ ಹಿಂದಷ್ಟೇ ಪ್ರಯಾಣ ಆರಂಭಿಸಿದ್ದರು. ವಿಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಆಟಗಾರರು ಕೋಲ್ಕತ್ತಾದಲ್ಲಿ ಉಳಿದುಕೊಂಡಿದ್ದರು.

ನಮ್ಮ ತಂಡದ ಆಟಗಾರರ ಅಂತಿಮ ಬ್ಯಾಚ್ ಸ್ವದೇಶಕ್ಕೆ ಮರಳಿದೆ. ಸುರಕ್ಷಿತವಾದ ಪ್ರಯಾಣ ವ್ಯವಸ್ಥೆಯಲ್ಲಿ ಅವರು ಬಂದು ತಲುಪಿದ್ದಾರೆ. ತಮ್ಮ ತಮ್ಮ ಮನೆಗಳಿಗೆ ಅವರೆಲ್ಲರೂ ತೆರಳಿದ್ದಾರೆಂದು ಕ್ರಿಕೆಟ್ ವೆಸ್ಟ್ ಇಂಡೀಸ್ ತಿಳಿಸಿದೆ. ಐಸಿಸಿ ಮತ್ತು ಸ್ಥಳೀಯ ಕ್ರಿಕೆಟ್ ಮಂಡಳಿಗೆ ಕೃತಜ್ಞತೆ ಸಲ್ಲಿಸಿದೆ. ಕಳೆದ ವಾರ ವೆಸ್ಟ್ ಇಂಡೀಸ್‌ನ 9 ಆಟಗಾರರು ತೆರಳಿದ್ದರು. ಉಳಿದ 16 ಆಟಗಾರರಿಗೆ ವಿಶೇಷ ವಿಮಾನದ ಮೂಲಕ ಕರೆದೊಯ್ಯಲಾಗಿತ್ತು.

## ನೆತನ್ಯಾಹು ಸಾವಿನ ವದಂತಿ : ಇಸ್ರೇಲ್ ನಕಾರ

• ಪ್ರಜೋದಯ ವರದಿ

**ನವದೆಹಲಿ** : ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಮಧ್ಯೆ ಬೆಂಜಮಿನ್ ನೆತನ್ಯಾಹು ಅವರ ಸಾವಿನ ವದಂತಿಗಳನ್ನು ಇಸ್ರೇಲ್ ಬಲವಾಗಿ ನಿರಾಕರಿಸಿದೆ. ಇಸ್ರೇಲ್ ಸರ್ಕಾರ ತನ್ನ ಪ್ರಧಾನಿ ಆರೋಗ್ಯವಾಗಿದ್ದಾರೆ ಎಂದು ಸ್ಪಷ್ಟಪಡಿಸಿದೆ. ವಾಸ್ತವವಾಗಿ, ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಅವರ ವೀಡಿಯೊ ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದ್ದು, ಇಸ್ರೇಲ್ ಪ್ರಧಾನಿಯನ್ನು ಹತ್ಯೆ ಮಾಡಲಾಗಿದೆ ಎಂಬ ಹೇಳಿಕೆಗೆ ಕಾರಣವಾಗಿದೆ.

ಸಂಘರ್ಷ ಹೆಚ್ಚುತ್ತಿರುವ ನಡುವೆ ಬೆಂಜಮಿನ್ ನೆತನ್ಯಾಹು ಅವರನ್ನು ಹತ್ಯೆ ಮಾಡಲಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವ ಹೇಳಿಕೆಗಳನ್ನು ಇಸ್ರೇಲ್ ಈಗ ತಳ್ಳಿಹಾಕಿದೆ. ನೆತನ್ಯಾಹು ಸಾವಿನ ವರದಿಗಳನ್ನು ಇಸ್ರೇಲ್ ಸುಳ್ಳು ಸುದ್ದಿ ಎಂದು ಬಣ್ಣಿಸಿದೆ.

## ಅಸ್ಸಾಂನಲ್ಲಿ ಬಜೆಟ್ ಹಣ ಕೈ ಜೇಬಿಗೆ: ಅಮಿತ್ ಶಾ ಆರೋಪ

• ಪ್ರಜೋದಯ ವರದಿ



**ಗುವಾಹಟಿ:** ಅಸ್ಸಾಂನಲ್ಲಿ ಕಳೆದ 15 ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವು ರಾಜ್ಯದ ಆರೋಗ್ಯ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಮೀಸಲಿಟ್ಟ ಹಣದಲ್ಲಿ ವಾರ್ಷಿಕ 150 ಕೋಟಿಯನ್ನು ತನ್ನ ಜೇಬಿಗೆ ಇಳಿಸಿಕೊಂಡಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಆರೋಪಿಸಿದರು.

ಅಸ್ಸಾಂನಲ್ಲಿ 2,092 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ, ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು. ಸಮಾಜದ ಎಲ್ಲಾ ವರ್ಗಗಳಿಗೆ ಕೈಗೆಟುಕುವ ದರದಲ್ಲಿ ಆರೋಗ್ಯ ಸೌಲಭ್ಯ ಒದಗಿಸಲು ಬಿಜೆಪಿ ಮತ್ತು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಶ್ರಮಿಸುತ್ತಿದ್ದಾರೆಂದು ಶ್ಲಾಘಿಸಿದರು.

10 ವರ್ಷಗಳ ಹಿಂದೆ ಅಸ್ಸಾಂ ಆರೋಗ್ಯ ಕ್ಷೇತ್ರವು ಅವ್ಯವಸ್ಥೆಯ ಬೀಡಾಗಿತ್ತು. ಪಕ್ಷದ ನಾಯಕರ ಕುಟುಂಬಗಳ ಆರ್ಥಿಕ ಆರೋಗ್ಯದ ಬಗ್ಗೆ ಮಾತ್ರ ಕಾಂಗ್ರೆಸ್ ಚಿಂತಿಸುತ್ತಿತ್ತು ಎಂದು ದೂರಿದರು.

ಎ.ಐ. ಜಾಗತಿಕ ಸಮಾವೇಶದಲ್ಲಿ ಕಾಂಗ್ರೆಸ್‌ನ ಕೆಲ ನಾಯಕರು ಶರ್ಟ್ ತೆಗೆದು ಪ್ರತಿಭಟಿಸಿ ದ್ದನ್ನು ಮತ್ತು ಸಂಸತ್ತಿನ ಮೆಟ್ಟಿಲುಗಳ ಮೇಲೆ ಚಹಾ ಕುಡಿದಿದ್ದನ್ನು ಅವರು ಟೀಕಿಸಿದರು. ಸಂಸತ್ತು ಪ್ರಜಾಪ್ರಭುತ್ವದ ಪವಿತ್ರ ಸ್ಥಳ. ಅದರ ಮೆಟ್ಟಿಲುಗಳನ್ನು ಧರಣಿಗೂ ಬಳಸಬಾರದು. ರಾಹುಲ್ ಗಾಂಧಿ ಅವರು ಅಲ್ಲಿ ಚಹಾ ಕುಡಿದು, ಪಕೋಡ ತಿಂದಿದ್ದಾರೆಂದು ವಾಗ್ದಾಳಿ ನಡೆಸಿದರು.

# ಪಿಎನ್‌ಜಿ ಹೊಂದಿರುವವರಿಗೆ ಎಲ್‌ಪಿಜಿ ಸಂಪರ್ಕ ನಿರ್ಬಂಧಿಸಿದ ಕೇಂದ್ರ

• ಪ್ರಜೋದಯ ವರದಿ

**ನವದೆಹಲಿ:** ಜಾಗತಿಕ ಇಂಧನ ಪೂರೈಕೆ ಅಡಚಣೆಗಳ ನಡುವೆ ಅಡುಗೆ ಅನಿಲ ಸರಬರಾಜಿನ ಮೇಲಿನ ಒತ್ತಡ ಕಡಿಮೆ ಮಾಡಲು ಕೊಳವೆ ಮೂಲಕ ಸರಬರಾಜಾಗುವ ನೈಸರ್ಗಿಕ ಅನಿಲ (ಪಿಎನ್‌ಜಿ) ಸಂಪರ್ಕ ಹೊಂದಿರುವವವರು ಸಬ್ಸಿಡಿ ದರದಲ್ಲಿ ನೀಡಲಾಗುವ ಗೃಹಬಳಕೆ ಎಲ್‌ಪಿಜಿ ಸಂಪರ್ಕಗಳನ್ನು ಉಳಿಸಿಕೊಳ್ಳುವುದನ್ನು ಅಥವಾ ಪಡೆಯುವುದನ್ನು ಸರ್ಕಾರ ನಿರ್ಬಂಧಿಸಿದೆ.



ಅಗತ್ಯ ಸರಕುಗಳ ಕಾಯ್ದೆಯಡಿಯಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಪೂರೈಕೆ ಮತ್ತು ವಿತರಣೆಯ ನಿಯಂತ್ರಣ) ಆದೇಶ 2000ಕ್ಕೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿ ವಾಲಯವು ತಿದ್ದುಪಡಿ ತಂದಿದ್ದು, ಪಿಎನ್‌ಜಿ ಸಂಪರ್ಕಗಳನ್ನು ಹೊಂದಿರುವ ಗ್ರಾಹಕರು ತಮ್ಮ ಗೃಹಬಳಕೆಯ ಎಲ್‌ಪಿಜಿ ಸಿಲಿಡಂರ್‌ಗಳನ್ನು ಹಿಂದಿರುಗಿಸುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಪಿಎನ್‌ಜಿ ಸಂಪರ್ಕ ಹೊಂದಿರುವವರಿಗೆ ಎಲ್‌ಪಿಜಿ ಸಂಪರ್ಕ ಅಥವಾ ರೀಫಿಲ್ಲಿಂಗ್ ಸಿಲಿಂಡರ್‌ಗಳನ್ನು ವಿತರಿಸಿದಂತೆ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಮತ್ತು ವಿತರಕರಿಗೆ ನಿರ್ಬಂಧವನ್ನೂ ತಿದ್ದುಪಡಿ ಆದೇಶದಲ್ಲಿ ಹೇರಲಾಗಿದೆ. ಕೊಳವೆ ಮೂಲಕ ನೈಸರ್ಗಿಕ ಅನಿಲ (ಪಿಎನ್‌ಜಿ) ಸಂಪರ್ಕ ಮತ್ತು ಗೃಹಬಳಕೆಯ ಎಲ್‌ಪಿಜಿ ಸಂಪರ್ಕ ಹೊಂದಿರುವ ಯಾವುದೇ ವ್ಯಕ್ತಿ, ಎಲ್‌ಪಿಜಿ ಸಿಲಿಂಡರ್ ಅನ್ನು ಕೂಡಲೇ ಹಿಂದಿರುಗಿಸಬೇಕು ಅಥವಾ ಯಾವುದೇ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಯಿಂದ ಅಥವಾ ವಿತರಕರ ಮೂಲಕ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ರೀಫಿಲ್ಲಿಂಗ್ ಪಡೆಯಬಾರದು. ಅಂತಹ ವ್ಯಕ್ತಿಗಳು ತಮ್ಮ ಗೃಹ ಬಳಕೆಯ ಎಲ್‌ಪಿಜಿ ಸಂಪರ್ಕವನ್ನು ತಕ್ಷಣವೇ ತ್ಯಜಿಸಬೇಕಾಗುತ್ತದೆಂದು ಆದೇಶದಲ್ಲಿ ತಿಳಿಸಲಾಗಿದೆ.

ಪಿಎನ್‌ಜಿ ಸಂಪರ್ಕ ಹೊಂದಿಲ್ಲದ ಎಲ್‌ಪಿಜಿ ಗ್ರಾಹಕರಿಗೆ ಆದ್ಯತೆ ನೀಡಲು ಈ ಆದೇಶ ಮಾಡಲಾಗಿದೆ. ಭಾರತವು ಶೇ.88ರಷ್ಟು ಕಚ್ಚಾತೈಲ, ಶೇ.50ರಷ್ಟು ನೈಸರ್ಗಿಕ ಅನಿಲ ಮತ್ತು ಶೇ.60ರಷ್ಟು ಎಲ್‌ಪಿಜಿಯನ್ನು ಆಮದು ಮಾಡಿಕೊಳ್ಳುತ್ತದೆ. ಅಮೇರಿಕಾ, ಇಸ್ರೇಲ್ ಮತ್ತು ಇರಾನ್ ಯುದ್ಧ ಆರಂಭಕ್ಕೂ ಮುನ್ನ ಭಾರತದ ಬಳಕೆಯ ಅರ್ಧದಷ್ಟು ಕಚ್ಚಾತೈಲ, ಶೇ. 30 ರಷ್ಟು ನೈಸರ್ಗಿಕ ಅನಿಲ ಮತ್ತು ಶೇ.85-90ರಷ್ಟು ಎಲ್‌ಪಿಜಿಯನ್ನು ಪಶ್ಚಿಮ ಏಷ್ಯಾ ದೇಶ ಗಳಾದ ಸೌದಿ ಅರೇಬಿಯಾ ಮತ್ತು ಯುಎಇಯಿಂದ ಬರುತ್ತಿತ್ತು. ಯುದ್ಧದಿಂದಾಗಿ ಗಲ್ಫ್ ಇಂಧನ ಸಾಗಣೆಯ ಪ್ರಮುಖ ಸಮುದ್ರ ಮಾರ್ಗ ಹೊರ್ಮುಜ್ ಜಲಸಂಧಿ ಮುಚ್ಚಿರು ವುದರಿಂದ ಸರಬರಾಜಿಗೆ ಅಡಚಣೆಯಾಗಿದೆ. ಭಾರತದ ತೈಲ ಸರಬರಾಜಿಗೂ ತೊಂದರೆ ಯಾಗಿದ್ದು, ರಷ್ಯಾದ ಮೊರೆ ಹೋಗಿದೆ.

## ಪದ್ಮ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ನವದೆಹಲಿ:** ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮ ವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳಿಗೆ ಸರ್ಕಾರ ಆನ್‌ಲೈನ್ ಮೂಲಕ ನಾಮನಿರ್ದೇಶನಗಳನ್ನು ಆಹ್ವಾನಿಸಿದೆ. 2027ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಅರ್ಜಿ ಸಲ್ಲಿಸಲು 2026ರ ಜುಲೈ 31 ಕೊನೆಯ ದಿನ. ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ https://awards.gov.in ಮೂಲಕ ಅರ್ಜಿ ಸಲ್ಲಿಸಬೇಕು. ಕಲೆ, ಸಾಹಿತ್ಯ, ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಮಾಜ ಕಾರ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾರ್ವಜನಿಕ ಸಂಪರ್ಕ, ನಾಗರಿಕ ಸೇವೆ, ಉದ್ಯಮ ಸೇರಿ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

ಅರ್ಜಿ ನಮೂನೆ, ಅರ್ಹತೆ ಮತ್ತು ಇತರೆ ಮಾಹಿತಿಗಳು ಪೋರ್ಟಲ್‌ನಲ್ಲಿ ಲಭ್ಯ ಇವೆ. ಪದ್ಮ ಪ್ರಶಸ್ತಿ ವೆಬ್‌ಸೈಟ್ https://padmaawards.gov.inಮೂಲಕವೂ ಹೆಚ್ಚಿನ ಮಾಹಿತಿ ಪಡೆಯಬಹುದೆಂದು ತಿಳಿಸಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK